KACD520001822020

**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು, ಹೊಸದುರ್ಗ.

**ದಿನಾಂಕ 1 ನೇ ಆಗಸ್ಟ್ 2026**

**ಅಸಲು ದಾವೆ ಸಂಖ್ಯೆಃ 16/2020**

**ಮತ್ತು 29/2019**

**ಅಸಲು ದಾವಾ ಸಂಖ್ಯೆಃ 16/2020 ರಲ್ಲಿನ ವಾದಿಗಳು -**

1. ಎಂ.ಎ ಪ್ರಕಾಶ್ ತಂದೆ ಆಂಜನೇಯ @ ಅಂಜಿನಪ್ಪ ಎನ್. ಆರ್,
ವಯಸ್ಸು ಸುಮಾರು 36 ವರ್ಷ,
ಖಾಸಗಿ ಕಂಪನಿಯಲ್ಲಿ ಕೆಲಸ,

2. ಎಂ.ಎ ದಯಾನಂದಾ ಸ್ವಾಮಿ,
ತಂದೆ ಆಂಜನೇಯ @ ಅಂಜಿನಪ್ಪ ಎನ್. ಆರ್,
ವಯಸ್ಸು ಸುಮಾರು 38 ವರ್ಷ,
ಪಶುವೈದ್ಯಕೀಯ ಮಹಾವಿದ್ಯಾಲಯ,
ಶಿವಮೊಗ್ಗ.

3. ಎಂ.ಎ ಬಸವರಾಜ,
ಆಂಜನೇಯ @ ಅಂಜಿನಪ್ಪ ಎನ್. ಆರ್,
ವಯಸ್ಸು ಸುಮಾರು 43 ವರ್ಷ,
ವ್ಯವಸಾಯ,

4. ಎಂ.ಎ ಲಲಿತಮ್ಮ ಗಂಡ ಈಶ್ವರಪ್ಪ,
ವಯಸ್ಸು ಸುಮಾರು 46 ವರ್ಷ,

ವಾಸಃ ಮಾಯಕೊಂಡ,
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

5. ಎಂ.ಎ. ಶೈಲಾ ಗಂಡ ಮಂಜುನಾಥ,
ವಯಸ್ಸು ಸುಮಾರು 30 ವರ್ಷ,
ವಾಸಃ ಹೊನ್ನೇನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು.

1 ಮತ್ತು 3 ನೇ ವಾದಿಯರ ವಾಸ
ಮಲಸಿಂಗನಹಳ್ಳಿ ಗ್ರಾಮ,
ಹೊಳಲ್ಕೇರೆ ತಾಲ್ಲೂಕು,

**(ವಾದಿಗಳ ಪರ ವಕೀಲರು - ಶ್ರೀ ಆರ್. ಕೃಷ್ಣಪ್ಪ )**

**ವಿರುದ್ಧ**

**ಪ್ರತಿವಾದಿಗಳು**

1. ನಾಗೇಂದ್ರಪ್ಪ ತಂದೆ ಲೇಟ್ ರಂಗಪ್ಪ,
**ಮೃತಪಟ್ಟಿದ್ದು, ಅವನ ವಾರಸುದಾರರು**

1(ಎ) ಮಾದಮ್ಮ ಗಂಡ ಲೇಟ್ ರಾಮಪ್ಪ,
ವಯಸ್ಸು ಸುಮಾರು 60 ವರ್ಷ,
ಮನೆಗೆಲಸ,

1(ಬಿ) ರತ್ನಮ್ಮ ಗಂಡ ಲೇಟ್‌ತಿಪ್ಪೇಸ್ವಾಮಿ,
ವಯಸ್ಸು ಸುಮಾರು 58 ವರ್ಷ,
ಮನೆಗೆಲಸ,

1(ಎ) ಮತ್ತು 1(ಬಿ) ನೇ ಪ್ರತಿವಾದಿಗಳ
ವಾಸಃ ಆಡನೂರು ಗ್ರಾಮ,
ಹೊಳಲ್ಕೆರೆ ತಾಲ್ಲೂಕು,

1(ಸಿ) ಕೋಟೆಪ್ಪ ತಂದೆ ನಾಗೇಂದ್ರಪ್ಪ,
ವಯಸ್ಸು ಸುಮಾರು 55 ವರ್ಷ,
ವ್ಯವಸಾಯ,

ವಾಸಃ ಮಲಸಿಂಗನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು,

1(ಡಿ) ಶ್ರೀಮತಿ ಸುಮಿತ್ರಮ್ಮ ಗಂಡ ಲೋಕೇಶಪ್ಪ,
ಮೃತಪಟ್ಟಿದ್ದು, ಅವಳ ವಾರಸುದಾರರು

1(ಡಿ)(ಎ)ಹರೀಶ ತಂದೆ ಲೇಟ್ ಲೋಕೇಶಪ್ಪ ,
ವಯಸ್ಸು ಸುಮಾರು 30 ವರ್ಷ,
ವ್ಯವಸಾಯ,

1(ಡಿ)(ಬಿ)ಗಿರೀಶ ತಂದೆ ಲೇಟ್ ಲೋಕೇಶಪ್ಪ ,
ವಯಸ್ಸು ಸುಮಾರು 28 ವರ್ಷ,
ವ್ಯವಸಾಯ,
ಇಬ್ಬರ ವಾಸಃ ಬೋಚೇನಹಳ್ಳಿ ಗ್ರಾಮ,
ದೇವಪುರ ಅಂಚೆ, ಹೊಸದುರ್ಗ ತಾಲ್ಲೂಕು.

2. ಶರಣಪ್ಪ ಎನ್. ಆರ್. ತಂದೆ ಲೇಟ್ ರಂಗಪ್ಪ,
ವಯಸ್ಸು ಸುಮಾರು 74 ವರ್ಷ,

3. ಆಂಜನೇಯ @ ಅಂಜನಪ್ಪ ಎನ್. ಆರ್. ತಂದೆ ಲೇಟ್ ರಂಗಪ್ಪ,
ವಯಸ್ಸು ಸುಮಾರು 72 ವರ್ಷ,

4. ದ್ಯಾಮಪ್ಪ ಎನ್. ಆರ್. ತಂದೆ ಲೇಟ್ ರಂಗಪ್ಪ,
ವಯಸ್ಸು ಸುಮಾರು 60 ವರ್ಷ,

5. ಕೆ.ಎಸ್. ಆಶಾ ಗಂಡ ಕೆ.ಸಿ.ಗುರುಸಿದ್ದಪ್ಪ,
ವಯಸ್ಸು ಸುಮಾರು 31 ವರ್ಷ,
ಮನೆಗೆಲಸ,
ವಾಸಃ ನಂದನಹೊಸೂರು,
ಹೊಳಲ್ಕೆರೆ ತಾಲ್ಲೂಕು.

1 ರಿಂದ 4 ನೇ ಪ್ರತಿವಾದಿಗಳ ವೃತ್ತಿ
ವ್ಯವಸಾಯ,

ವಾಸಃ ಮಳಸಿಂಗನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು.

(1(ಎ) ರಿಂದ 1(ಡಿ), 2, 4 ನೇ ಪ್ರತಿವಾದಿಗಳ ಪರ ವಕೀಲರು -ಶ್ರೀಮತಿ ಹೆಚ್.ಎಸ್. ರುಕ್ಮಿಣಿ )

(3 ನೇ ಪ್ರತಿವಾದಿ ಪರ ವಕೀಲರು-ಶ್ರೀ ಎಂ.ಎಸ್. ಸದ್ಯೋಜಾತ )

(5 ನೇ ಪ್ರತಿವಾದಿಯ ಪರ ವಕೀಲರು -ಶ್ರೀ ಎನ್. ಗುರುಬಸಪ್ಪ)

(1(ಡಿ)(ಎ) ಮತ್ತು 1(ಡಿ)(ಬಿ)ನೇ ಪ್ರತಿವಾದಿಗಳ ಸ್ಥಾನದಲ್ಲಿ (ಏಕತರ್ಫಿಯ)

**ಅಸಲು ದಾವಾ ಸಂಖ್ಯೆಃ 29/2019 ರಲ್ಲಿನ ವಾದಿ -**

ಶ್ರೀಮತಿ ಕೆ.ಎಸ್. ಆಶಾ ಗಂಡ ಕೆ.ಸಿ.ಗುರುಸಿದ್ದಪ್ಪ,
ವಯಸ್ಸು ಸುಮಾರು 32 ವರ್ಷ,
ಮನೆಗೆಲಸ ಮತ್ತು ವ್ಯವಸಾಯ,
ವಾಸಃ ನಂದನಹೊಸೂರು,
ಹೊಳಲ್ಕೆರೆ ತಾಲ್ಲೂಕು.
ಚಿತ್ರದುರ್ಗ ಜಿಲ್ಲೆ.

**(ವಾದಿಯ ಪರ ವಕೀಲರು - ಶ್ರೀ ಎನ್. ಗುರುಬಸಪ್ಪ )**

**ವಿರುದ್ಧ**

**ಪ್ರತಿವಾದಿಗಳು -**

1. ನಾಗೇಂದ್ರಪ್ಪ @ ನಾಕಿಕೆರೆ ನಾಗೇಂದ್ರಪ್ಪ ತಂದೆ ಲೇಟ್ ರಂಗಪ್ಪ,
ವಯಸ್ಸು ಸುಮಾರು 88 ವರ್ಷ,
**ಮೃತಪಟ್ಟಿದ್ದು, ಅವನ ವಾರಸುದಾರರು**

1(ಎ) ಮಾದಮ್ಮ ಗಂಡ ಲೇಟ್ ನಾಗೇಂದ್ರಪ್ಪ,
ವಯಸ್ಸು ಸುಮಾರು 60 ವರ್ಷ,
ಮನೆಗೆಲಸ,

1(ಬಿ) ರತ್ನಮ್ಮ ಗಂಡ ಲೇಟ್ ತಿಪ್ಪೇಸ್ವಾಮಿ,
ವಯಸ್ಸು ಸುಮಾರು 58 ವರ್ಷ,
ಮನೆಗೆಲಸ,

1(ಎ) ಮತ್ತು 1(ಬಿ) ನೇ ಪ್ರತಿವಾದಿಗಳ
ವಾಸಃ ಆಡನೂರು ಗ್ರಾಮ,
ಹೊಳಲ್ಕೆರೆ ತಾಲ್ಲೂಕು,

1(ಸಿ) ಕೋಟೆಪ್ಪ ತಂದೆ ನಾಗೇಂದ್ರಪ್ಪ,
ವಯಸ್ಸು ಸುಮಾರು 55 ವರ್ಷ,
ವ್ಯವಸಾಯ,
ವಾಸಃ ಮಲಸಿಂಗನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು,

1(ಡಿ) ಶ್ರೀಮತಿ ಸುಮಿತ್ರಮ್ಮ ಗಂಡ ಲೋಕೇಶಪ್ಪ,
ವಯಸ್ಸು ಸುಮಾರು 53 ವರ್ಷ,
ಮನೆಗೆಲಸ,
ವಾಸಃ ಬೋಚೇನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು,
**ಮೃತಪಟ್ಟಿದ್ದು, ಅವಳ ವಾರಸುದಾರರು**

1(ಡಿ)(ಎ)ಹರೀಶ ತಂದೆ ಲೇಟ್ ಲೋಕೇಶಪ್ಪ ,
ವಯಸ್ಸು ಸುಮಾರು 30 ವರ್ಷ,
ವ್ಯವಸಾಯ,

1(ಡಿ)(ಬಿ)ಗಿರೀಶ ತಂದೆ ಲೇಟ್ ಲೋಕೇಶಪ್ಪ ,
ವಯಸ್ಸು ಸುಮಾರು 28 ವರ್ಷ,
ವ್ಯವಸಾಯ,
ಇಬ್ಬರ ವಾಸಃ ಬೋಚೇನಹಳ್ಳಿ ಗ್ರಾಮ,
ದೇವಪುರ ಅಂಚೆ, ಹೊಸದುರ್ಗ ತಾಲ್ಲೂಕು.

2. ಶರಣಪ್ಪ ತಂದೆ ಲೇಟ್ ರಂಗಪ್ಪ,
ವಯಸ್ಸು ಸುಮಾರು 74 ವರ್ಷ,

3. ಅಂಜನಪ್ಪ ತಂದೆ ಲೇಟ್ ರಂಗಪ್ಪ,
ವಯಸ್ಸು ಸುಮಾರು 72 ವರ್ಷ,

4. ದ್ಯಾಮಪ್ಪ ತಂದೆ ಲೇಟ್ ರಂಗಪ್ಪ,

ವಯಸ್ಸು ಸುಮಾರು 59 ವರ್ಷ,
ಎಲ್ಲರು ವ್ಯವಸಾಯಗಾರರು,
ವಾಸಃ ಮಳಸಿಂಗನಹಳ್ಳಿ ಗ್ರಾಮ,
ತಾಳ್ಯ ಹೋಬಳಿ,
ಹೊಳಲ್ಕೆರೆ ತಾಲ್ಲೂಕು.
ಚಿತ್ರದುರ್ಗ ಜಿಲ್ಲೆ.

5. ಎಂ.ಎ ಪ್ರಕಾಶ್ ತಂದೆ ಆಂಜನೇಯ @ ಅಂಜಿನಪ್ಪ ಎನ್. ಆರ್,
ವಯಸ್ಸು ಸುಮಾರು 37 ವರ್ಷ,
ಖಾಸಗಿ ಕಂಪನಿಯಲ್ಲಿ ಕೆಲಸ,
ವಾಸಃ ಮಲಸಿಂಗನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು.

6. ಎಂ.ಎ ದಯಾನಂದಾ ಸ್ವಾಮಿ,
ತಂದೆ ಆಂಜನೇಯ @ ಅಂಜಿನಪ್ಪ ಎನ್. ಆರ್,
ವಯಸ್ಸು ಸುಮಾರು 39 ವರ್ಷ,
ಪಶುವೈದ್ಯಕೀಯ ಮಹಾವಿದ್ಯಾಲಯ,
ಶಿವಮೊಗ್ಗ.

7. ಎಂ.ಎ ಬಸವರಾಜ,
ಆಂಜನೇಯ @ ಅಂಜಿನಪ್ಪ ಎನ್. ಆರ್,
ವಯಸ್ಸು ಸುಮಾರು 44 ವರ್ಷ,
ವ್ಯವಸಾಯ,
ವಾಸಃ ಮಲಸಿಂಗನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು.

8. ಎಂ.ಎ ಲಲಿತಮ್ಮ ಗಂಡ ಈಶ್ವರಪ್ಪ,
ವಯಸ್ಸು ಸುಮಾರು 47 ವರ್ಷ,
ವಾಸಃ ಮಾಯಕೊಂಡ,
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

9. ಎಂ.ಎ. ಶೈಲಜಾ ಗಂಡ ಮಂಜುನಾಥ,
ವಯಸ್ಸು ಸುಮಾರು 31 ವರ್ಷ,

ವಾಸಃ ಹೊನ್ನೇನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು.

(1(ಎ) ರಿಂದ 1(ಡಿ),2 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರು -ಶ್ರೀಮತಿ ಹೆಚ್. ಎಸ್. ರುಕ್ಮಿಣಿ )
(3 ನೇ ಪ್ರತಿವಾದಿ ಪರ ವಕೀಲರು- ಶ್ರೀ ಎಂ.ಎಸ್. ಸದ್ಯೋಜಾತ )
(5 ರಿಂದ 9 ನೇ ಪ್ರತಿವಾದಿಗಳ ಪರ ವಕೀಲರು-ಶ್ರೀ ಆರ್. ಕೃಷ್ಣಪ್ಪ)
(1(ಡಿ)(ಎ) ಮತ್ತು 1(ಡಿ)(ಬಿ)ನೇ ಪ್ರತಿವಾದಿಗಳ ಸ್ಥಾನದಲ್ಲಿ ಏಕತರ್ಫಿಯ)

| | |
|---|---|
| ಮೂಲ ದಾವೆ ನಂ-16/2020 ನ್ನು ದಾಖಲು ಮಾಡಿದ ದಿನಾಂಕ: | 07-03-2020 |
| ಮೂಲ ದಾವೆ ನಂ-29/2019 ನ್ನು ದಾಖಲು ಮಾಡಿದ ದಿಃ | 18-07-2019 |
| ಮೂಲ ದಾವೆ ನಂ-16/2020 ರ ದಾವೆಯ ಸ್ವರೂಪ | ಘೋಷಣೆ, ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿದ ದಾವೆ |
| ಮೂಲ ದಾವೆ ನಂ-29/2019 ರ ದಾವೆಯ ಸ್ವರೂಪ | ನಿರ್ದಿಷ್ಟ ಕರಾರಿನ ಅನುಸ್ಥಾನ ಕೋರಿ ಸಲ್ಲಿಸಿದ ದಾವೆ |
| ಸಾಕ್ಷಿ ದಾಖಲು ಮಾಡಲು ಪ್ರಾರಂಭಿಸಿದ ದಿನಾಂಕ | 16-07-2021 |
| ತೀರ್ಪು ಘೋಷಣೆ ಮಾಡಿದ ದಿನಾಂಕ | 01-08-2026 |

| | ವರ್ಷಗಳು | ತಿಂಗಳು | ದಿನಗಳು |
|---|---|---|---|
| ಮೂಲ ದಾವೆ ನಂ-16/2020 ರ ಒಟ್ಟು- ಕಾಲಾವಧಿ | -06- | -04- | 24- |
| ಮೂಲ ದಾವೆ ನಂ-29/2019 ರ ಒಟ್ಟು ಕಾಲಾವಧಿ | 07- | -00- | -13- |

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸದುರ್ಗ.**

**ತೀರ್ಪು**

ಮೂಲ ದಾವೆ ನಂ-16/2020 ಹಾಗೂ ಮೂಲ ದಾವೆ ನಂ-29/2019 ರಲ್ಲಿನ ಪಕ್ಷಗಾರರು ಹಾಗೂ ದಾವಾ ಆಸ್ತಿ ಒಂದೇ ಇರುವ ಕಾರಣ, ಮೂಲ ದಾವೆ ನಂ-29/2019 ನ್ನು ಮೂಲ ದಾವೆ ನಂ-16/2020 ರ ಜೊತೆ ಒಟ್ಟುಗೂಡಿಸಿ, ಸಾಮಾನ್ಯ ಸಾಕ್ಷಿಯನ್ನು ದಾಖಲು ಮಾಡಿಕೊಂಡು, ಸಾಮಾನ್ಯ ತೀರ್ಪನ್ನು ಮಾಡಲಾಗಿದೆ.

**2**. ಅಸಲು ದಾವಾ ಸಂಖ್ಯೆ16/2020 ನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ದಾವಾ ಆಸ್ತಿಯಲ್ಲಿ 3 ನೇ ಪ್ರತಿವಾದಿಯ ¼ ಹಿಸ್ಸೆಯಲ್ಲಿ ತಮಗೆ ತಲಾ 1/6 ಹಿಸ್ಸೆಯ ಹಕ್ಕು ಇದೆ ಎಂದು ಘೋಷಿಸಿ, ಅದರಂತೆ ಪ್ರತ್ಯೇಕ ಸ್ವಾಧೀನತೆ ಕೊಡಿಸಬೇಕೆಂದು, 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯ ಹೆಸರಿಗೆ ದಿನಾಂಕಃ 04-04-2019 ರಂದು ಬರೆದು ಕೊಟ್ಟ ಕ್ರಯದ ಕರಾರು ಪತ್ರವು ಕಾನೂನುಬಾಹಿರವಾಗಿದ್ದು, ಅದು ತಮ್ಮ ಹಿಸ್ಸೆಗೆ ಬಾಂದಾಯಿಸುವುದಿಲ್ಲವೆಂದು, ದಾವಾ ಆಸ್ತಿಯಲ್ಲಿ ತಮಗೆ ಪೂರ್ವ ಕ್ರಯದ ಹಕ್ಕು ಇದೆ ಎಂದು ಘೋಷಿಸಿ, 1 ನೇ ವಾದಿಯ ಹೆಸರಿಗೆ 1 ರಿಂದ 4 ನೇ ಪ್ರತಿವಾದಿಗಳು ಅವರ ಹಿಸ್ಸೆಯ ಸ್ವತ್ತನ್ನು ಮಾರಾಟ ಮಾಡಿದ ಪ್ರತಿಫಲದ ಹಣ ನಿರ್ಧರಿಸಿ, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವಂತೆ ಹಾಗೂ 5 ನೇ ಪ್ರತಿವಾದಿ ನೀಡಿದ ಮುಂಗಡ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲು ನಿರ್ದೇಶಿಸಬೇಕೆಂದು ಹಾಗೂ ನ್ಯಾಯಾಲಯಕ್ಕೆ ಸರಿಕಂಡ ಪರಿಹಾರಗಳನ್ನು ಕೋಡಿಸಬೇಕೆಂದು ಕೋರಿರುತ್ತಾರೆ.

**3**. ಅಸಲು ದಾವಾ ಸಂಖ್ಯೆ 29/2019 ನ್ನು ವಾದಿಯು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ದಾವಾ ಆಸ್ತಿಗೆ ಸಂಬಂಧಿಸಿದಂತೆ 04-04-2019 ರಂದು ಬರೆದುಕೊಟ್ಟ ನೊಂದಾಯಿತ ಕ್ರಯದ ಕರಾರು ಪತ್ರದಂತೆ, ಉಳಿದ ಮೊತ್ತ

6,20,000/- ರೂಗಳನ್ನು ಪಡೆದು, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ನಿರ್ದೇಶಿಸಿ ಆದೇಶಿಸಬೇಕೆಂದು ಹಾಗೂ ನ್ಯಾಯಾಲಯಕ್ಕೆ ಸರಿಕಂಡ ಪರಿಹಾರಗಳನ್ನು ಕೋಡಿಸಬೇಕೆಂದು ಕೋರಿರುತ್ತಾಳೆ.

**4. <u>ಅಸಲು ದಾವಾ ಸಂಖ್ಯೆ-16/2020 ರ ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-</u>**

1 ರಿಂದ 4 ನೇ ಪ್ರತಿವಾದಿಯರು ಖಾಸಾ ಅಣ್ಣ-ತಮ್ಮಂದಿರಾಗಿದ್ದು, ಮೃತ ರಂಗಪ್ಪನ ಮಕ್ಕಳಿರುತ್ತಾರೆ. ವಾದಿಗಳು 3 ನೇ ಪ್ರತಿವಾದಿಯ ಮಕ್ಕಳಿರುತ್ತಾರೆ. 5 ನೇ ಪ್ರತಿವಾದಿಯು ದಾವಾ ತಪಶೀಲಿನ ಆಸ್ತಿಯನ್ನು ವಾದಿಗಳ ತಿಳುವಳಿಕೆ ಇಲ್ಲದಂತೆ ಆಪಾದಿತ ನೊಂದಣಿ ಕ್ರಯದ ಕರಾರು ಪತ್ರದ ಮೂಲಕ ಅವಳ ಹೆಸರಿಗೆ ಉಳಿದ ಪ್ರತಿವಾದಿಗಳಿಂದ ಸೇರಿ ಸೃಷ್ಟಿಸಿ ಕೊಂಡಿರುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತವಾಗಿ ಪ್ರತಿವಾದಿಯರ ತಂದೆಯಾದ ಮೃತ ರಂಗಪ್ಪನಿಗೆ ಬಂದಿರುತ್ತದೆ. ಸದರಿ ಪ್ರತಿವಾದಿಗಳ ತಂದೆ ಮರಣ ಹೊಂದಿದ ಮೇಲೆ ವಾರಸುದಾರಿಕೆಯ ಮೇಲೆ ಪ್ರತಿವಾದಿಯರಿಗೆ ಬಂದಿರುತ್ತದೆ. ಆದ್ದರಿಂದ, 1 ರಿಂದ 4 ನೇ ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬಕ್ಕೆ ಸೇರಿರುತ್ತಾರೆ. ಅದೇ ರೀತಿ 3 ನೇ ಪ್ರತಿವಾದಿ ಮಕ್ಕಳಾದ ವಾದಿಯರು ಕೂಡ ಹಿಂದೂ ಅವಿಭಕ್ತ ಕುಟುಂಬದವರಾಗಿರುತ್ತಾರೆ. ಆದ್ದರಿಂದ, 1 ರಿಂದ 4 ನೇ ಪ್ರತಿವಾದಿಯರು ಹಾಗು ವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಸ್ವತ್ತಿನಲ್ಲಿ ಹಕ್ಕುಳ್ಳವರಾಗಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಯರ ತಂದೆ ರಂಗಪ್ಪ ಮತ್ತು ಅವನ ಹೆಂಡತಿಯಾದ ಹನುಮಕ್ಕಳ ತವರೂರು ಮಲಸಿಂಗನಹಳ್ಳಿ ಗ್ರಾಮಕ್ಕೆ ಆಕೆಯ ತವರು ಮನೆಯ ಅಳಿಯನಾದ ತವರು ಮನೆ ಆಸ್ತಿಗಳನ್ನು ನೋಡಿಕೊಳ್ಳಲು ಹೊಸದುರ್ಗ ತಾಲ್ಲೂಕು, ನಾಕೀಕೆರೆ ಗ್ರಾಮದಿಂದ ಹೊಳಲ್ಕೆರೆ ತಾಲ್ಲೂಕಿನ ಮಲಸಿಂಗನಹಳ್ಳಿ ಗ್ರಾಮಕ್ಕೆ

ಬಂದು ಹೆಂಡತಿ ತವರು ಮನೆಯಲ್ಲಿ ವಾಸವಾಗಿದ್ದನು. ಅವನು ಮತ್ತು ಅವನ ಹೆಂಡತಿಯ ಪೌತಿ ತರುವಾಯ ಪ್ರತಿವಾದಿಗಳೇ ಸದರಿ ಅಜ್ಜಿಯ ಸ್ವತ್ತುಗಳನ್ನು ಮತ್ತು ಅವುಗಳಿಂದ ಬಂದ ಉತ್ಪತ್ತಿಯಿಂದ ಸಂಪಾದಿಸಿದ ಸ್ವತ್ತುಗಳನ್ನುಅನುಭಸಿಕೊಂಡು ಬಂದಿದ್ದು, ಅವರವರ ಹೆಣ್ಣುಮಕ್ಕಳ ಮಧ್ಯೆ ಉದ್ಭವಿಸಿದ ಮಾತುಗಳಿಂದ ಈಗ್ಗೆ ಸುಮಾರು 20 ವರ್ಷದಲ್ಲಿ ಮಲಸಿಂಗನಹಳ್ಳಿ ತಾಳ್ಯ ಗ್ರಾಮಗಳಿದ್ದ ಅವರ ಒಟ್ಟು ಕುಟುಂಬದ ಸ್ವತ್ತುಗಳನ್ನು ಮಾತ್ರ ಜುಬಾನಿ ವಿಭಾಗದ ಮೂಲಕ ಅವರವರ ಹಿಸ್ಸೆಯ ಆಸ್ತಿಗಳನ್ನು ಹೊಂದಿ ಪ್ರತ್ಯೇಕವಾಗಿ ಅವರವರ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸ ಮಾಡುತ್ತಾ ಜೀವನ ಸಾಗಿಸುತ್ತ- ಬಂದಿರುತ್ತಾರೆ. ಹೆಚ್ಚಿನ ಹಿಸ್ಸೆಯನ್ನು ವಾದಿಯರ ತಂದೆಯ ಸಹೋದರರು ಪಡೆದು ಕಡಿಮೆ ಹಿಸ್ಸೆಯನ್ನು ವಾದಿಯರ ತಂದೆಗೆ ಕೊಟ್ಟು ವಾದಿಗಳಿಗೆ ಅನ್ಯಾಯ ಮಾಡಿರುತ್ತಾರೆ. ದಾವಾ ಆಸ್ತಿಯನ್ನು ವಿಭಾಗಿಸಿ ಕೊಂಡಿರುವುದಿಲ್ಲ ಹಾಗೆಯೆ ಜಂಟಿ ಹಿಸ್ಸೆ ಸ್ವಾಧೀನಾನುಭವದಲ್ಲಿ ಮುಂದುವರೆಸಿರುತ್ತಾರೆ. ಈ ಮಧ್ಯೆ ವಾದಿಯ ತಂದೆ 3 ನೇ ಪ್ರತಿವಾದಿಯು ಉಳಿದ ವಾದಿಯರ ಚಿತಾವಣೆಗೆ ಒಳಗಾಗಿ ವಾದಿಯರಿಗೆ ಗೊತ್ತಿಲ್ಲದಂತೆ ವಾದಿಯರ ಒಪ್ಪಿಗೆ ಇಲ್ಲದೆ, ಸಹಿ ಇಲ್ಲದೆ ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಗೆ ರಿಜಿಸ್ಟರ್ ನೊಂದಣಿ ಆಪಾದಿತ ಸ್ವಾಧೀನ ರಹಿತ ಶುದ್ಧ ಕ್ರಯದ ಒಪ್ಪಂದದ ಕರಾರು ಪತ್ರವನ್ನು ರೂ.10,80,000/- ಪ್ರತಿಫಲದ ಹಣಕ್ಕೆ ಮಾರಾಟ ಮಾಡಿರುವುದಾಗಿ ಆ ಬಾಬ್ತು ಪೈಕಿ ನಗದಾಗಿ ರೂ.4,60,000/- ಗಳನ್ನು ಮುಂಗಡವಾಗಿ ಪಡೆದು 5 ನೇ ಪ್ರತಿವಾದಿ ಹೆಸರಿಗೆ ದಿನಾಂಕಃ 04-04-2019 ರ ಪ್ರಕಾರ ನೊಂದಣಿ ಪತ್ರವನ್ನು ಉಳಿದ ಪ್ರತಿವಾದಿಯರು ಮಾಡಿಕೊಟ್ಟಿರುವಂತೆ ಕ್ರಯದ ಒಪ್ಪಂದದ ದಾಖಲೆಯನ್ನು ಸೃಷ್ಟಿರುತ್ತಾರೆ. ಇಂತಹ ಆಪಾದಿತ ಸ್ವಾಧೀನ ರಹಿತ ಶುದ್ಧಕ್ರಯದ ಒಪ್ಪಂದದ ದಾಖಲೆಯು ಕಾನೂನುಬಾಹಿರವಾಗಿದ್ದು, ವಿಧಿ ವಿರುದ್ಧವಾಗಿದ್ದು, ವಾದಿಯರಿಗೆ ದಾವಾ ಆಸ್ತಿಯಲ್ಲಿರುವ ಅವರ ಕಾನೂತ್ಮಕ ಹಕ್ಕಿನ ಹಿಸ್ಸೆಯ ಮೇಲೆ

ಬಂಧನಕಾರಿಯಾಗಿರುವುದಿಲ್ಲ ಮತ್ತು ಶೂನ್ಯದಿಂದ ಕೂಡಿರುತ್ತದೆ. ಪ್ರತಿವಾದಿಯರ ಕಾನೂನು ಬಾಹಿರ ನಡವಳಿಕೆಯಿಂದ ಸೃಷ್ಟಿತವಾದ ದಾಖಲೆಯ ಸಂಗತಿಯ ತಿಳಿದ ಕೂಡಲೇ ವಾದಿಯರು ಸಂಬಂಧಪಟ್ಟ ಇಲಾಖೆಯಲ್ಲಿ ವಿಚಾರಿಸಿದಾಗ ಆ ಕ್ರಯದ ಒಪ್ಪಂದದ ದಾಖಲೆಯನ್ನು ಪಡೆದು ನೋಡಿದಾಗ, ಪ್ರತಿವಾದಿಯರ ಕಾನೂನು ಬಾಹಿರದ ಕ್ರಮಗಳ ನಡವಳಿಕೆಗಳಿಂದ ವಾದಿಯರಿಗೆ ಅನ್ಯಾಯವಾದ್ದರಿಂದ ವಾದಿಗಳು ಪ್ರತಿವಾದಿಗಳನ್ನು ದಾವಾ ಆಸ್ತಿಗಳಲ್ಲಿರುವ ಅವರ ಕಾನೂನಾತ್ಮಕ ಹಿಸ್ಸೆಯ ಹಕ್ಕಿನ ಭಾಗದ ಸ್ವತ್ತನ್ನು ವಿಭಾಗಿಸಿ, ಪ್ರತ್ಯೇಕಿಸಿ ಸ್ವಾಧೀನವನ್ನು ಕೊಡಿಸುವಂತೆ ಮುಕ್ತವಾಗಿ ಹಿರಿಯರಿಂದ ಹಿತೈಷಿಗಳಿಂದ ಹೇಳಿಸಿದಾಗ್ಯೂ ಹಾಗೂ 1 ರಿಂದ 4 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಇರುವ ಅವರವರ ಹಕ್ಕಿನ ಹಿಸ್ಸೆಯನ್ನು ಆಪಾದಿತ ಕ್ರಯದ ಒಪ್ಪಂದದ ಮೌಲ್ಯಕ್ಕೆ ಮಾರಾಟ ಮಾಡುವಂತೆಯೂ, ಮುಂಗಡ ಹಣವನ್ನು ಸಕಾಲದಲ್ಲಿ ಹಿಂದಿರುಗಿಸುವುದಾಗಿ ಎಷ್ಟು ಬಾರಿ ಕೇಳಿಕೊಂಡರೂ, ಮಾಡಿದ ಎಲ್ಲಾ ಪ್ರಯತ್ನಗಳು ವ್ಯರ್ಥವಾಗಿರುತ್ತವೆ. 2019 ನೇ ಆಗಸ್ಟ್ 30 ನೇ ತಾರಿಕನಂದು ಪ್ರತಿವಾದಿಗಳು ಎಲ್ಲರೂ ಮಿಲಾಫಿಯಾಗಿ ವಾದಿಯರ ಕೋರಿಕೆಯನ್ನು ತಿರಸ್ಕರಿಸಿರುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿರುವ ಅವರ ಹಕ್ಕಿನ ಹಿಸ್ಸೆಯನ್ನು ಬೇರ್ಪಡಿಸಿ, ಸ್ವಾಧೀನವಹಿಸಲು ನಿರಾಕರಿಸಿದ ದಿನಾಂಕ 30-08-2019 ರಂದು ಮತ್ತು ಪ್ರತಿವಾದಿಯರು ಸೇರಿಕೊಂಡು ಕ್ರಯದ ಕರಾರು ಪತ್ರವನ್ನು ದಿನಾಂಕಃ 28-08-2019 ರಂದು ಸೃಷ್ಟಿಸಿದ್ದರಿಂದ, ವ್ಯಾಜ್ಯ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ದಾವೆಯಲ್ಲಿ ಕೇಳಿದಂತೆ ತಮ್ಮ ಪರ ಡಿಕ್ರಿಮಾಡಬೇಕೆಂದು ವಾದಿಯರು ಪ್ರಾರ್ಥಿಸಿಕೊಂಡಿರುತ್ತಾರೆ.

**5**. ಪ್ರತಿವಾದಿಯರಿಗೆ ದಾವೆಯ ಸಮನ್ಸನ್ನು ಕಳುಹಿಸಲಾಗಿ, 1(ಎ) ರಿಂದ 1(ಡಿ), 2 ರಿಂದ 5 ನೇ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, 2 ನೇ ಪ್ರತಿವಾದಿ ತನ್ನ ಪರ ಲಿಖಿತ ಹೇಳಿಕೆಯನ್ನು, ಅದೇ ರೀತಿ 3 ನೇ ಪ್ರತಿವಾದಿ ತನ್ನ ಪರ

ಲಿಖಿತ ಹೇಳಿಕೆಯನ್ನು ಮತ್ತು 5 ನೇ ಪ್ರತಿವಾದಿ ತನ್ನ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. 1 ಡಿ(ಎ) ಮತ್ತು 1(ಡಿ)(ಬಿ)ನೇ ಪ್ರತಿವಾದಿಗಳಿಗೆ ದಾವೆಯ ಸಮನ್ಸ್ ಜಾರಿಯಾಗಿದ್ದರೂ ಸಹ, ಹಾಜರಾಗದ ಕಾರಣ ಅವರ ಸ್ಥಾನದಲ್ಲಿ ಏಕತರ್ಫಿಯವಾಗಿರುತ್ತದೆ.

**6. <u>2 ನೇ ಪ್ರತಿವಾದಿಯರ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ</u>-**

1 ರಿಂದ 4 ನೇ ಪ್ರತಿವಾದಿಗಳು ಸಹೋದರರು ಮತ್ತು ಅವರು ದಾವ ತಪಶೀಲಿನ ಆಸ್ತಿಗೆ ಜಂಟಿ ಮಾಲಕರು ಹಾಗೂ ಸ್ವಾಧೀನಾನುಭವದಾರರಾಗಿದ್ದು, ಖಾತೆಯು ಅವರ ಹೆಸರಿನಲ್ಲಿ ಇರುತ್ತದೆ. 1 ರಿಂದ 4 ನೇ ಪ್ರತಿವಾದಿಗಳು ದಿನಾಂಕಃ 04-04-2019 ರಂದು ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಗೆ 10,80,000/- ರೂಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ 4,60,000/- ರೂಗಳನ್ನು ಮುಂಗಡವಾಗಿ ಪಡೆದು, ಉಳಿದ 6,20,000/- ರೂಗಳನ್ನು 3 ತಿಂಗಳ ಒಳಗಾಗಿ 5 ನೇ ಪ್ರತಿವಾದಿಯಿಂದ ಪಡೆದುಕೊಳ್ಳುವುದಾಗಿ ಒಪ್ಪಿ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತದೆ. ಆದಾದನಂತರ, 5 ನೇ ಪ್ರತಿವಾದಿಯು 1 ರಿಂದ 4 ನೇ ಪ್ರತಿವಾದಿಗಳನ್ನು ಭೇಟಿ ಮಾಡಿ ಉಳಿದ ಮೊತ್ತವನ್ನು ಪಡೆದು, ತನ್ನ ಪರ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ಕೇಳಿಕೊಂಡಿರುತ್ತಾಳೆ. ಈ ಮಧ್ಯೆ 3 ನೇ ಪ್ರತಿವಾದಿಯು ಮೋಸ ಮಾಡಿ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ನಿರಾಕರಿಸಿರುತ್ತಾನೆ. ಇಂದಿಗೂ 1,2 ಮತ್ತು 4 ನೇ ಪ್ರತಿವಾದಿಗಳು ಉಳಿದ ಕ್ರಯದ ಕರಾರಿನ ಮೊತ್ತ ಪಡೆದು, 5 ನೇ ಪ್ರತಿವಾದಿಯ ಪರ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ತಯಾರಿ ಇರುತ್ತಾರೆ.ಆದರೆ, 3 ನೇ ಪ್ರತಿವಾದಿಯು ಆ ರೀತಿ ಬರೆದುಕೊಡುತ್ತಿಲ್ಲ. ಆದಾದನಂತರ, 3 ನೇ ಪ್ರತಿವಾದಿಯು ತನ್ನ ಮಕ್ಕಳ ಮೂಲಕ ಈ ದಾವೆಯನ್ನು ದಾವಾ ಆಸ್ತಿಗೆ

ಸಂಬಂಧಿಸಿದಂತೆ ಸುಳ್ಳು ಸಂಗತಿಗಳ ಮೇಲೆ ಸಲ್ಲಿಸಿದ್ದು, ವಾದಿಗಳಿಗೆ ಆ ರೀತಿ ಮಾಡಲು ಯಾವುದೇ ಹಕ್ಕು ಇರುವುದಿಲ್ಲವೆಂದು ಹಾಗೂ ವಾದಪತ್ರದಲ್ಲಿ ಆರೋಪಿಸಿರುವ ಉಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಅಲ್ಲಗಳೆಯುತ್ತಾ, ವಾದಿಯರ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು 2 ನೇ ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**7. <u>3 ನೇ ಪ್ರತಿವಾದಿಯ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ</u>-**

1, 2 ಮತ್ತು 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಯ ಗಂಡನೊಂದಿಗೆ ಹಣದ ಬಗ್ಗೆ ವ್ಯವಹಾರ ಮಾಡಿಕೊಂಡಿದ್ದ ಕಾರಣದಿಂದ, ಅದರ ಭದ್ರತೆಗಾಗಿ 5 ನೇ ಪ್ರತಿವಾದಿಯ ಹೆಸರಿಗೆ ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಸಿಕೊಡಲು 3 ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆದರೆ, ಸದರಿ ಆಪಾದಿತ ಕ್ರಯದ ಕರಾರಿನ ಪತ್ರದಲ್ಲಿ ಹೇಳಿರುವ ಪ್ರತಿಫಲವನ್ನು 3 ನೇ ಪ್ರತಿವಾದಿ ಪಡೆದಿರುವುದಿಲ್ಲ ಮತ್ತು ದಾವಾ ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿ ಕ್ರಯದ ಕರಾರು ಪತ್ರವನ್ನು ಉಳಿದ ಪ್ರತಿವಾದಿಗಳೊಂದಿಗೆ ಬರೆದುಕೊಟ್ಟಿಲ್ಲ. ದಾವಾ ಸ್ವತ್ತು ಕೆರೆಯ ಸಮೀಪದಲ್ಲಿದ್ದು, ನೀರಿನಾಶ್ರಯ ಚೆನ್ನಾಗಿರುತ್ತದೆ ಮತ್ತು ಮ್ಯಾಗ್ನೀಸ್ ಖಣಿಜದ ಸಂಪತ್ತಿನಿಂದ ಇರುವ ಫಲವತ್ತಾದ ಜಮೀನಾಗಿರುತ್ತದೆ ಮತ್ತು ಭದ್ರ ಚಾನಲ್ ಗೆ ಅತೀ ಸಮೀಪದಲ್ಲಿರುತ್ತದೆ. ಇಂತಹ ಬೆಲೆ ಬಾಳುವ ದಾವಾ ಆಸ್ತಿಯನ್ನು ದಿನಾಂಕಃ 04-04-2019 ರ ಕ್ರಯದ ಕರಾರು ಪತ್ರದಲ್ಲಿ ಹೇಳಿರುವ ಪ್ರತಿಫಲದ ಹಣಕ್ಕೆ ಮಾರಾಟ ಮಾಡುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ, ದಾವಾ ಸ್ವತ್ತು ತುಂಬಾ ಬೆಲೆ ಬಾಳುವ ಸ್ವತ್ತಾಗಿರುತ್ತದೆ. ಅಂತಹದ್ದರಲ್ಲಿ, ಕೇವಲ ಕಡಿಮೆ ಬೆಲೆಗೆ ಮಾರಾಟ ಮಾಡುವ ಅವಶ್ಯಕತೆ ಪ್ರತಿವಾದಿಗಳಿಗೆ ಇರುವುದಿಲ್ಲ. 1,2 ಮತ್ತು 4 ನೇ ಪ್ರತಿವಾದಿಗಳು ಖಾಸಾ ಸಹೋದರರಾಗಿದ್ದು, ನಂಬಿಸಿ

ಸದರಿ ಪತ್ರಕ್ಕೆ 3 ನೇ ಪ್ರತಿವಾದಿಯ ಸಹಿ ಪಡೆದು ದಾವಾ ಆಸ್ತಿಯನ್ನು ಲಪಟಾಯಿಸುವ ಉನ್ನಾರ ಮಾಡಿರುತ್ತಾರೆ. ಸದರಿ ಕ್ರಯದ ಕರಾರುಪತ್ರದಲ್ಲಿ ಹೇಳಿರುವ ಮೊತ್ತಕ್ಕೆ 3 ನೇ ಪ್ರತಿವಾದಿಯು ಕೊಂಡುಕೊಳ್ಳಲು ತಯಾರಿ ಇರುತ್ತಾನೆ. 5 ನೇ ಪ್ರತಿವಾದಿಗೆ ಕ್ರಯದ ಕರಾರುಪತ್ರದಲ್ಲಿ ಹೇಳಿರುವ ಪ್ರತಿಫಲದ ಹಣವನ್ನು ಕೊಟ್ಟು ಕೊಂಡುಕೊಳ್ಳುವಂತಹ ಶಕ್ತಿ ಇಲ್ಲ. ಆದ್ದರಿಂದ, ವಾದಿಗಳು ಅವರ ವಾದಪತ್ರದಲ್ಲಿ 3 ನೇ ಪ್ರತಿವಾದಿಯ ವಿರುದ್ಧ ಹೇಳಿರುವ ಎಲ್ಲಾ ಅಂಶಗಳು ಶುದ್ಧ ಸುಳ್ಳಾಗಿರುತ್ತವೆ. 1, 2, ಮತ್ತು 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯೊಂದಿಗೆ ಷರಿಕ್ಕಾಗಿ ದಾವಾ ಸ್ವತ್ತನ್ನು ಲಪಟಾಯಿಸುವ ದುರುದ್ದೇಶದಿಂದ ವಾದಿಯರ ಬೇಡಿಕೆಯನ್ನು ತಿರಸ್ಕರಿಸಿರುತ್ತಾರೆ. ಆದರೆ 3 ನೇ ಪ್ರತಿವಾದಿಯು ವಾದಿಯರಿಗೆ ಕಾನೂನು ಬದ್ಧವಾಗಿ ದಾವಾ ಸ್ವತ್ತಿನಲ್ಲಿ ಸೇರಬೇಕಾದ ಅವರ ಹಿಸ್ಸೆಯನ್ನು ವಿಭಾಗಿಸಿಕೊಡಲು ಯಾವತ್ತು ತಯಾರಿ ಇರುತ್ತಾನೆ. ಆದ್ದರಿಂದ, ವಾದಿಗಳ ದಾವೆಯನ್ನು ವಜಾಗೊಳಿಸಬೇಕೆಂದು 3 ನೇ ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**8. <u>5 ನೇ ಪ್ರತಿವಾದಿಯ ಲಿಖಿತ-ಹೇಳಿಕೆ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ</u>-**

1 ರಿಂದ 4 ನೇ ಪ್ರತಿವಾದಿಗಳು ದಾವ ತಪಶೀಲಿನ ಆಸ್ತಿಗೆ ಜಂಟಿ ಮಾಲಕರು ಹಾಗೂ ಸ್ವಾಧೀನಾನುಭವದಾರರಾಗಿದ್ದು, ಖಾತೆಯು ಅವರ ಹೆಸರಿನಲ್ಲಿ ಇರುತ್ತದೆ. 1 ರಿಂದ 4 ನೇ ಪ್ರತಿವಾದಿಗಳು ದಿನಾಂಕಃ 04-04-2019 ರಂದು ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಗೆ 10,80,000/- ರೂಗಳಿಗೆ ಮಾರಾಟ ಮಾಡಲು ಸಾಕ್ಷಿದಾರರ ಸಮಕ್ಷಮ ಒಪ್ಪಿಕೊಂಡು ಮತ್ತು ಅದರಂತೆ, ಅವರು ದಿನಾಂಕ 04/04/2019 ರಂದು ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದೇ ದಿನದಂದು ಸಾಕ್ಷಿದಾರರ ಸಮಕ್ಷಮ 5 ನೇ ಪ್ರತಿವಾದಿಯಿಂದ ಮುಂಗಡವಾಗಿ ರೂ.4,60,00,000/- ರೂಗಳನ್ನು

ಪಡೆದಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಗಳು ಬಾಕಿ ಉಳಿದ ಕ್ರಯದ ಕರಾರು ಮೊತ್ತವಾದ 6,20,00,000/-ನ್ನು ಸದರಿ ಕ್ರಯದ ಕರಾರು ಒಪ್ಪಂದದ ದಿನದಿಂದ 3 ತಿಂಗಳೊಳಗೆ 5 ನೇ ಪ್ರತಿವಾದಿಯಿಂದ ಸ್ವೀಕರಿಸಲು ಒಪ್ಪಿಕೊಂಡಿರುತ್ತಾರೆ. ತದನಂತರ 1 ರಿಂದ 4 ನೇ ಪ್ರತಿವಾದಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಅವಶ್ಯವಾದ ದಾಖಲೆಗಳನ್ನು ಪಡೆದ ನಂತರ, ಖರೀದಿದಾರಳಾದ 5 ನೇ ಪ್ರತಿವಾದಿ ಕರೆದಾಗ ಅವಳ ಪರವಾಗಿ ನೋಂದಾಯಿತ ಕ್ರಯ ಪತ್ರವನ್ನು ಬರೆದುಕೊಡಲು ಒಪ್ಪಿಕೊಂಡಿರುತ್ತಾರೆ. ಅದರಂತೆ ದಿನಾಂಕಃ 03/07/2019 ರಂದು 5 ನೇ ಪ್ರತಿವಾದಿ 1 ರಿಂದ 4 ನೇ ಪ್ರತಿವಾದಿಗಳನ್ನು ಸಂಪರ್ಕಿಸಿ, ಬಾಕಿ ಕ್ರಯದ ರೂ. 6,20,000/- ಗಳನ್ನು ಪಾವತಿಸಲು ಸಿದ್ಧಳಿರುವುದಾಗಿ ಮತ್ತು ಸದರಿ ಬಾಕಿ ಮೊತ್ತವನ್ನು ಸ್ವೀಕರಿಸಿ ತನ್ನ ಹೆಸರಿಗೆ ನೋಂದಾಯಿತ ಕ್ರಯ ಪತ್ರವನ್ನು ಮಾಡಿಕೊಡಲು 1 ರಿಂದ 4 ನೇ ಪ್ರತಿವಾದಿಗಳಿಗೆ ವಿನಂತಿಸಿರುತ್ತಾಳೆ. ಆದರೆ, 1 ರಿಂದ 4 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಯ ಸಲುವಾಗಿ ದುರುದ್ದೇಶದಿಂದ ಮುಂದೂಡುತ್ತಾ ಬಂದಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯಿಂದ ಬಾಕಿ ಮೊತ್ತವಾದ ರೂ. 6,20,000/-ಗಳನ್ನು ಸ್ವೀಕರಿಸಲು ವಿಫಲರಾಗಿದ್ದು, ಮತ್ತು ಆಕೆಯು ಪದೇ ಪದೇ ವಿನಂತಿಸಿಕೊಂಡರೂ ಸಹ, ಆಕೆಯ ಪರವಾಗಿ ನೋಂದಾಯಿತ ಕ್ರಯ ಪತ್ರವನ್ನು ಬರೆದುಕೊಡಲು ವಿಫಲರಾಗಿರುತ್ತಾರೆ. ಆದಕಾರಣ, 5 ನೇ ಪ್ರತಿವಾದಿಯು ಅನಿವಾರ್ಯವಾಗಿ ತನ್ನ ವಕೀಲರ ಮೂಲಕ ದಿನಾಂಕಃ 04/07/2019 ರಂದು 1 ರಿಂದ 4 ನೇ ಪ್ರತಿವಾದಿಗಳಿಗೆ ಕಾನೂನು ರಿತ್ಯ ನೋಟೀಸ್ ಕಳುಹಿಸಿದ್ದು. ಅದರಲ್ಲಿ, ಒಪ್ಪಿಕೊಂಡಂತೆ ಬಾಕಿ ಮೊತ್ತವಾದ ರೂ. 6,20,000/- ಗಳನ್ನು 5 ನೇ ಪ್ರತಿವಾದಿಯಿಂದ ಸ್ವೀಕರಿಸಿ, 5 ನೇ ಪ್ರತಿವಾದಿಯ ಪರವಾಗಿ ನೋಂದಾಯಿತ ಕ್ರಯ ಪತ್ರವನ್ನು ಬರೆದುಕೊಡುವಂತೆ 1 ರಿಂದ 4 ನೇ ಪ್ರತಿವಾದಿಗಳಿಗೆ ತಿಳಿಸಲಾಗಿದ್ದು, ಮತ್ತು 5 ನೇ ಪ್ರತಿವಾದಿಯು ಹೊಸದುರ್ಗದ ಉಪ-ನೋಂದಣಾಧಿಕಾರಿಗಳ ಕಚೇರಿಯಲ್ಲಿ

ದಿನಾಂಕ- 11/07/2019 ರಂದು 1 ರಿಂದ 4ನೇ ಪ್ರತಿವಾದಿಗಳ ಸಲುವಾಗಿ ಕಾಯ್ದಿರುತ್ತಾಳೆ. ಆದರೆ, 1 ರಿಂದ 4 ನೇ ಪ್ರತಿವಾದಿಗಳಿಗೆ ಕಾನೂನು ನೋಟೀಸ್ ಜಾರಿಗೊಳಿಸಿದ್ದಾಗ್ಯೂ, ಅವರು ಅಂದು ಹೊಸದುರ್ಗದ ಉಪ-ನೋಂದಣಾಧಿಕಾರಿಗಳ ಕಚೇರಿಗೆ ಹಾಜರಾಗಲು ವಿಫಲರಾಗಿರುತ್ತಾರೆ. ಮತ್ತು ಸದರಿ ನೋಟೀಸ್‌ಗೆ ಉತ್ತರಿಸಲು ಸಹ ವಿಫಲರಾಗಿರುತ್ತಾರೆ. ಆದ್ದರಿಂದ, 5ನೇ ಪ್ರತಿವಾದಿಯು ಕಾನೂನಿನ ಪ್ರಕಾರ ನೋಂದಾಯಿತ ಕ್ರಯ ಪತ್ರವನ್ನು ಪಡೆಯಲು, ಹೊಸದುರ್ಗದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅಸಲು ದಾವ ಸಂಖ್ಯೆ 29/2019 ನ್ನು ಸಲ್ಲಿಸಿರುತ್ತಾಳೆ. ವಾದಿಗಳಿಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಇರುವುದಿಲ್ಲ. ವಾದಿಗಳು 1 ನೇ ಪ್ರತಿವಾದಿಯ ಮಕ್ಕಳಿರುತ್ತಾರೆ. 3ನೇ ಪ್ರತಿವಾದಿ 5ನೇ ಪ್ರತಿವಾದಿಗೆ ನಷ್ಟವನ್ನು ಉಂಟುಮಾಡುವ ಮತ್ತು ಲಾಭವನ್ನು ಮಾಡಿಕೊಳ್ಳುವ ಉದ್ದೇಶದಿಂದ ತಮ್ಮ ಗಂಡು ಮಕ್ಕಳನ್ನು ಪ್ರಚೋದಿಸಿ, ಸುಳ್ಳು ಸಂಗತಿಗಳನ್ನು ಬನಾವಟ್ಟು ಮಾಡಿ, ಈ ಮೂಲಕ 5ನೇ ಪ್ರತಿವಾದಿಯ ವಿರುದ್ಧ ಈ ದಾವೆಯನ್ನು ದಾಖಲಿಸುವಂತೆ ಮಾಡಿರುತ್ತಾನೆ. ಆದಾಗ್ಯೂ ವಾದಿಗಳಿಗೆ ಯಾವುದೇ ರೀತಿಯಲ್ಲಿ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕಿರುವುದಿಲ್ಲ. ಆದ್ದರಿಂದ, 5ನೇ ಪ್ರತಿವಾದಿಯ ವಿರುದ್ಧ ವಾದಿಗಳು ಸಲ್ಲಿಸಿರುವ ದಾವೆಯು ಕಾನೂನಿನ ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು ಹಾಗೂ ವಾದಪತ್ರದಲ್ಲಿ ಆರೋಪಿಸಿರುವ ಉಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಅಲ್ಲಗಳೆಯುತ್ತಾ, ವಾದಿಯರ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು 5ನೇ ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾಳೆ.

**9. <u>ಅಸಲು ದಾವಾ ಸಂಖ್ಯೆ-29/2019 ರ ವಾದ ಪತ್ರದ ಸಂಕ್ಷಿಪ್ತ ಸಾರಾಂಶ</u>**

**<u>ಈ ಕೆಳಗಿನಂತಿದೆಃ-</u>**

1 ರಿಂದ 4 ಪ್ರತಿವಾದಿಗಳು ದಾವಾ ಸ್ವತ್ತಿನ ಮಾಲಕರು ಹಾಗೂ ಸ್ವಾಧೀನಾನುಭವದಾರರಾಗಿದ್ದು, ಖಾತೆಯು ಸಹ ಅವರ ಹೆಸರಿನಲ್ಲೇ ಇರುತ್ತದೆ. ದಿನಾಂಕ 04/04/2019 ರಂದು ಪ್ರತಿವಾದಿಗಳು ಸಾಕ್ಷಿದಾರರ ಸಮಕ್ಷಮ ರೂ.10,80,000/- ಗಳಿಗೆ ದಾವಾ ಸ್ವತ್ತನ್ನು ವಾದಿಯ ಪರವಾಗಿ ಮಾರಾಟ ಮಾಡಲು ಒಪ್ಪಿಕೊಂಡಿದ್ದು, ಅದರಂತೆ, ಅವರು ದಿನಾಂಕ 04/04/2019 ರಂದು ಕ್ರಯದ ಕರಾರು ಒಪ್ಪಂದದ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದೇ ದಿನದಂದು ಸಾಕ್ಷಿದಾರರ ಸಮಕ್ಷಮ ವಾದಿಯಿಂದ ಮುಂಗಡ ಹಣವಾಗಿ ರೂ. 4,60,000/-ಗಳನ್ನು ಪಡೆದಿರುತ್ತಾರೆ ಮತ್ತು ಸದರಿ ಕ್ರಯದ ಕರಾರು ಒಪ್ಪಂದದ ದಿನಾಂಕದಿಂದ ಮೂರು ತಿಂಗಳೊಳಗೆ ಬಾಕಿ ಉಳಿದಿರುವ ಕ್ರಯದ ರೂ. 6,20,000/-ಗಳನ್ನು ವಾದಿಯಿಂದ ಪಡೆಯಲು ಒಪ್ಪಿಕೊಂಡಿರುತ್ತಾರೆ. ತದನಂತರ ವಾದಿಯು ನಿಗದಿತ ಅವಧಿಯೊಳಗೆ ಸಂಬಂಧಪಟ್ಟ ಅಧಿಕಾರಿಗಳಿಂದ ನೋಂದಾಯಿತ ಕ್ರಯಪತ್ರದ ಅನುಷ್ಠಾನಕ್ಕೆ ಅಗತ್ಯವಿರುವ ದಾಖಲೆಗಳನ್ನು ಪಡೆದ ನಂತರ, ವಾದಿಯು ಅವರನ್ನು ಕೇಳಿದಾಗ ವಾದಿಯ ಪರವಾಗಿ ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಡಲು ಸಹ ಅವರು ಒಪ್ಪಿಕೊಂಡಿರುತ್ತಾರೆ. ತದನಂತರ ದಿನಾಂಕ 03/07/2019 ರಂದು ವಾದಿಯು ಬಾಕಿ ಕ್ರಯದ ಮೊತ್ತವಾದ ರೂ.6,20,000/-ಗಳೊಂದಿಗೆ ಪ್ರತಿವಾದಿಗಳನ್ನು ಭೇಟಿ ಮಾಡಿ, ಸದರಿ ಬಾಕಿ ಮೊತ್ತವನ್ನು ಸ್ವೀಕರಿಸಲು ಮತ್ತು ನೋಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ಪ್ರತಿವಾದಿಗಳನ್ನು ಕೇಳಿಕೊಂಡಿರುತ್ತಾಳೆ. ಆದರೆ ಪ್ರತಿವಾದಿಗಳು 3ನೇ ಪ್ರತಿವಾದಿಯ ನೆಪವೊಡ್ಡಿ ತಮ್ಮ ದುರುದ್ದೇಶದಿಂದ ಮುಂದೂಡುತ್ತಾ ಬಂದಿರುತ್ತಾರೆ. ಪ್ರತಿವಾದಿಗಳು ವಾದಿಯಿಂದ ಬಾಕಿ ಮೊತ್ತವಾದ ರೂ 6,20,000/- ಗಳನ್ನು ಸ್ವೀಕರಿಸಲು ವಿಫಲರಾಗಿದ್ದು, ಮತ್ತು ವಾದಿಯು ಪದೇ ಪದೇ

ವಿನಂತಿಸಿಕೊಂಡಿದಾಗ್ಯೂ ಸಹ, ವಾದಿಯ ಪರವಾಗಿ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ವಿಫಲರಾಗಿರುತ್ತಾರೆ. ಆದ್ದರಿಂದ, ವಾದಿಯು ತನ್ನ ವಕೀಲರ ಮೂಲಕ ದಿನಾಂಕ:04-07-2019 ರಂದು ಎಲ್ಲಾ ಪ್ರತಿವಾದಿಗಳಿಗೆ ಕಾನೂನು ನೋಟೀಸ್ ಜಾರಿಗೊಳಿಸಿದ್ದು, ಒಪ್ಪಿಕೊಂಡಂತೆ ಬಾಕಿ ಉಳಿದಿರುವ ರೂ.6,20,000/-ಗಳನ್ನು ಪಡೆದ ನಂತರ ವಾದಿಯ ಪರವಾಗಿ ನೋಂದಾಯಿತ ಕ್ರಯ ಪತ್ರವನ್ನು ಬಂದು ಬರೆದುಕೊಡಬೇಕೆಂದು ಪ್ರತಿವಾದಿಗಳನ್ನು ಕೋರಿರುತ್ತಾಳೆ ಹಾಗೂ ಪ್ರತಿವಾದಿಗಳಿಗೆ ದಿನಾಂಕ:11-07-2019 ರಂದು ಹೊಸದುರ್ಗದ ಉಪ-ನೋಂದಣಾಧಿಕಾರಿಗಳ ಕಚೇರಿಯ ಮುಂದೆ ಬಂದು ನೋಂದಾಯಿತ ಕ್ರಯ ಪತ್ರವನ್ನು ಬರೆದುಕೊಟ್ಟು ಬಾಕಿ ಮೊತ್ತವನ್ನು ಸ್ವೀಕರಿಸುವಂತೆ ತಿಳಿಸಿರುತ್ತಾಳೆ. ಆದರೆ, ಪ್ರತಿವಾದಿಗಳಿಗೆ ಕಾನೂನು ನೋಟೀಸ್‌ಗಳು ಜಾರಿಯಾಗಿದ್ದರೂ ಸಹ, ಅವರು ಆ ದಿನ ಹೊಸದುರ್ಗದ ಉಪ-ನೋಂದಣಾಧಿಕಾರಿಗಳ ಕಛೇರಿಯ ಮುಂದೆ ಹಾಜರಾಗಲು ವಿಫಲರಾಗಿರುತ್ತಾರೆ ಮತ್ತು ಸದರಿ ನೋಟೀಸ್‌ಗೆ ಉತ್ತರಿಸಲು ಸಹ ವಿಫಲರಾಗಿರುತ್ತಾರೆ. ಒಪ್ಪಿಕೊಂಡಂತೆ ಪ್ರತಿವಾದಿಗಳಿಗೆ ಬಾಕಿ ಉಳಿದಿರುವ ಕ್ರಯದ ಕರಾರು ಪತ್ರದ ರೂ 6,20,000/-ಗಳನ್ನು ಪಾವತಿಸಿದ ನಂತರ ಪ್ರತಿವಾದಿಗಳಿಂದ ನೋಂದಾಯಿತ ಕ್ರಯ ಪತ್ರವನ್ನು ಬರೆಸಿಕೊಳ್ಳಲು ವಾದಿಯು ಸದಾ ತಯಾರಿ ಹಾಗೂ ಇಚ್ಛೆಯುಳ್ಳವಳಾಗಿರುತ್ತಾಳೆ. ಆದರೆ, ಪ್ರತಿವಾದಿಗಳು ತಮ್ಮ ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ದಿನಾಂಕ-04-04-2019 ರಂದು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಪ್ರತಿವಾದಿಗಳು ವಾದಿಯ ಪರ ಬರೆದುಕೊಟ್ಟಾಗ, ಅದಾದನಂತರ ಹಲವಾರು ಬಾರಿ ಕೇಳಿದರೂ ಸಹ, ಪ್ರತಿವಾದಿಗಳು ನೊಂದಾಯಿ ಕ್ರಯಪತ್ರವನ್ನು ಬರೆದುಕೊಡಲು ವಿಫಲರಾದಾಗ ದಿನಾಂಕ:04-07-2019 ರಂದು ನೋಟೀಸನ್ನು ನೀಡಿದಾಗ, ದಾವಾ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ದಾವೆಯಲ್ಲಿ ಕೇಳಿದಂತೆ ತನ್ನ ಪರ ಡಿಕ್ರಿಮಾಡಬೇಕೆಂದು ವಾದಿ ಪ್ರಾರ್ಥಿಸಿಕೊಂಡಿರುತ್ತಾಳೆ.

**10.** ಪ್ರತಿವಾದಿಯರಿಗೆ ದಾವೆಯ ಸಮನ್ಸನ್ನು ಕಳುಹಿಸಲಾಗಿ, 1 ರಿಂದ 9 ನೇ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, 2 ನೇ ಪ್ರತಿವಾದಿ ತನ್ನ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, 1 ಮತ್ತು 4 ನೇ ಪ್ರತಿವಾದಿಗಳು ಮೆಮೋ ಸಲ್ಲಿಸುವುದರ ಮೂಲಕ, 2 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿರುತ್ತಾರೆ. 3 ನೇ ಪ್ರತಿವಾದಿ ತನ್ನ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಮತ್ತು 5 ರಿಂದ 9 ನೇ ಪ್ರತಿವಾದಿಗಳು ತಮ್ಮ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. 1(ಡಿ)(ಎ) ಮತ್ತು 1(ಡಿ)(ಬಿ)ನೇ ಪ್ರತಿವಾದಿಗಳಿಗೆ ದಾವೆಯ ಸಮನ್ಸ್ ಜಾರಿಯಾಗಿದ್ದರೂ ಹಾಜರಾಗದ ಕಾರಣ ಅವರ ಸ್ಥಾನದಲ್ಲಿ ಏಕತರ್ಫಿಯವಾಗಿರುತ್ತದೆ.

**11. <u>2 ನೇ ಪ್ರತಿವಾದಿಯ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ</u>-**

ಪ್ರತಿವಾದಿಗಳು ಈಗಲೂ ಸಹ, ಕ್ರಯದ ಬಾಕಿ ಮೊತ್ತವನ್ನು ಪಡೆದು ವಾದಿಯ ಪರ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ತಯಾರಿ ಇರುತ್ತಾರೆ. ದಾವಾ ಆಸ್ತಿಯ ಖಾತೆಯು ಈಗಲೂ ಸಹ, 1 ರಿಂದ 4 ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಇರುತ್ತದೆ. 3 ನೇ ಪ್ರತಿವಾದಿಯು ತನ್ನ ಭಾಗದ ಮೊತ್ತವನ್ನು ವಾದಿಯಿಂದ ಸ್ವೀಕರಿಸಿರುತ್ತಾನೆ. ಈಗ 3 ನೇ ಪ್ರತಿವಾದಿಯು ಉಳಿದ ಪ್ರತಿವಾದಿಗಳೊಂದಿಗೆ ಸೇರಿ, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ತಯಾರಿ ಇರುವುದಿಲ್ಲ. 1, 2 ಮತ್ತು 4 ನೇ ಪ್ರತಿವಾದಿಗಳು ಕ್ರಯದ ಕರಾರಿನ ಉಳಿದ ಮೊತ್ತವನ್ನು ಪಡೆದು, ನೊಂದಾಯಿತ ಕ್ರಯಪತ್ರವನ್ನು ವಾದಿಯ ಪರ ಬರೆದುಕೊಡಲು ಸದಾ ತಯಾರಿ ಇರುತ್ತಾರೆ. ಆದ್ದರಿಂದ, ಈ ಪ್ರತಿವಾದಿಗಳ ಯಾವುದೇ ತಪ್ಪು ಇರುವುದಿಲ್ಲ. 3 ನೇ ಪ್ರತಿವಾದಿಯು ಜಗಳದ ಸ್ವಭಾವದವನಾಗಿದ್ದು, ಅವನು ತನ್ನ ಕ್ರಯದ ಉಳಿದ ಮೊತ್ತವನ್ನು ಪಡೆದು, ಕ್ರಯಪತ್ರವನ್ನು ಬರೆದುಕೊಡಲು

ಉದ್ದೇಶಪೂರ್ವಕವಾಗಿ ತಪ್ಪಿಸುತ್ತಿದ್ದಾನೆ. ಅವನ ಈ ಕೃತ್ಯದಿಂದ 1,2 ಮತ್ತು 4 ನೇ ಪ್ರತಿವಾದಿಗಳ ಮರ್ಯಾದಿಯು ಸಾರ್ವಜನಿಕವಾಗಿ ಹಾಳಾಗಿರುತ್ತದೆಂದು ವಾದಪತ್ರದ ಖಂಡಿಕೆ-2 ರಲ್ಲಿ ಹೇಳಿರುವ ಅಂಶಗಳು ನಿಜವೆಂದು ಒಪ್ಪಿಕೊಂಡು, ವಾದಿಯ ದಾವೆಯನ್ನು ತಮ್ಮ ವಿರುದ್ಧ ವಜಾಗೊಳಿಸಬೇಕೆಂದು 2 ನೇ ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**12. <u>3 ನೇ ಪ್ರತಿವಾದಿಯ ಲಿಖಿತ-ಹೇಳಿಕೆ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ</u>-**

ಪ್ರತಿವಾದಿಗಳ ಪೂರ್ವಜರು ಮೂಲತಃ ಹೊಸದುರ್ಗ ತಾಲ್ಲೂಕು, ಮಾಡದಕೆರೆ ಹೋಬಳಿ, ನಾಕೀಕೆರೆ ಗ್ರಾಮದವರು. 1 ರಿಂದ 3 ನೇ ಪ್ರತಿವಾದಿಗಳ ತಂದೆಯು ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಮಲಸಿಂಗನೇಹಳ್ಳಿ ಗ್ರಾಮಕ್ಕೆ ವಲಸೆ ಹೋಗಿರುತ್ತಾನೆ. ದಾವಾ ಆಸ್ತಿಗೆ ಪ್ರತಿವಾದಿಗಳು ಮತ್ತು ಅವ ತಂದೆ ಮಾಲಕರಾಗಿ ಸ್ವಾಧೀನನಾನುಭವವನ್ನು ಹೊಂದಿರುತ್ತಾರೆ. ವಾದಿಯು ದಾವಾ ಆಸ್ತಿ ಮತ್ತು 3 ನೇ ಪ್ರತಿವಾದಿಗೆ ಅಪರಿಚಿತಳು. 1, 2 ಮತ್ತು 4 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಯ ಸಹೋದರರು. ಅವರು ವಾದಿಯ ಗಂಡನೊಂದಿಗೆ ಹಣಕಾಸಿನ ವ್ಯವಹಾರದ ಸಂಬಂಧವನ್ನು ಹೊಂದಿರುತ್ತಾರೆ. ಆದ್ದರಿಂದ, 1, 2 ಮತ್ತು 4 ನೇ ಪ್ರತಿವಾದಿಗಳು ದಿನಾಂಕಃ 04-04-2020 ರಂದು ವಾದಿಯ ಪರವಾಗಿ ಭದ್ರತೆಯ ಸಲುವಾಗಿ ಬರೆದುಕೊಟ್ಟ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಆದಷ್ಟು ಬೇಗನೇ ರದ್ದುಪಡಿಸುವುದಾಗಿ, ವಾದಿ ಮತ್ತು 1, 2 ಹಾಗೂ 4 ನೇ ಪ್ರತಿವಾದಿಗಳು ಹೇಳಿ, 3 ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆದರೆ, 3 ನೇ ಪ್ರತಿವಾದಿಯು ವಾದಿಯಿಂದ ಕ್ರಯದ ಕರಾರಿನ ಮೊತ್ತವನ್ನು ಪಡೆದುಕೊಂಡಿಲ್ಲ. 3 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಿಲ್ಲ ಹಾಗೂ ಕ್ರಯದ ಕರಾರು ಪತ್ರವನ್ನು ಉಳಿದ ಪ್ರತಿವಾದಿಗಳೊಂದಿಗೆ ಸೇರಿ

ವಾದಿಯ ಪರ ಬರೆದುಕೊಟ್ಟಿಲ್ಲ. ಉಳಿದ ಪ್ರತಿವಾದಿಗಳು ವಾದಿಯ ಗಂಡನೊಂದಿಗೆ ಮಿಲಾಫಿಯಾಗಿ, 3 ನೇ ಪ್ರತಿವಾದಿಯ ವಿರುದ್ಧ ಸುಳ್ಳು ಹೇಳಿಕೆಯನ್ನು ಕೊಟ್ಟಿರುತ್ತಾರೆ. ದಾವಾ ಆಸ್ತಿಯು ಕೆರೆಯ ಹತ್ತಿರ ಇದ್ದು, ಒಳ್ಳೆಯ ನೀರಿನ ಸೌಲಭ್ಯವನ್ನು ಹೊಂದಿದ್ದು ಮತ್ತು ಮ್ಯಾಂಗನೀಸ್ ಖನಿಜವನ್ನು ಹೊಂದಿದ ಫಲವತ್ತಾದಂತಹ ಬೆಲೆಬಾಳುವ ಜಮೀನಾಗಿರುತ್ತದೆ. ಆದ್ದರಿಂದ, ದಾವಾ ಆಸ್ತಿಯನ್ನು ದಿನಾಂಕಃ 04-04-2019 ರ ಆರೋಪಿತ ಕ್ರಯದ ಕರಾರು ಪತ್ರದಲ್ಲಿ ಹೇಳಿದ ಮೊತ್ತಕ್ಕೆ ಮಾರಾಟ ಮಾಡಲು ಸಾಧ್ಯವಿಲ್ಲ. 1, 2 ಮತ್ತು 4 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಯ ಸಹೋದರರು ಇದ್ದ ಕಾರಣ, ನಂಬಿಕೆಯಿಂದ 3 ನೇ ಪ್ರತಿವಾದಿಯ ಸಹಿಯನ್ನು ಪಡೆದು ವಾದಿಯ ಗಂಡನೊಂದಿಗೆ ಮಿಲಾಫಿಯಾಗಿ ದಾವಾ ಆಸ್ತಿಯನ್ನು ಪಡೆದುಕೊಳ್ಳುವ ಉದ್ದೇಶವನ್ನು ಹೊಂದಿರುತ್ತಾರೆ. 3 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಆರೋಪಿತ ಕ್ರಯದಲ್ಲಿ ಹೇಳಿರುವ ಮೊತ್ತಕ್ಕೆ ಖರೀದಿಸಲು ತಯಾರಿ ಇರುತ್ತಾನೆ. ಆದ್ದರಿಂದ, ವಾದಿ ಮತ್ತು 1,2 ಹಾಗೂ 4 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಯ ಪರ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ಭಾದ್ಯಸ್ಥರಾಗಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿಸಲು ಸಾಮರ್ಥ್ಯವಿರುದಿಲ್ಲ. 3 ನೇ ಪ್ರತಿವಾದಿಯು ಆರೋಪಿತ ಕ್ರಯದ ಕರಾರು ಪತ್ರದಲ್ಲಿ ಹೇಳಿರುವ ಕ್ರಯದ ಮೊತ್ತವನ್ನು ಜೊತೆಗೆ ನ್ಯಾಯಾಲಯದ ಶುಲ್ಕವನ್ನು, ಒಂದು ವೇಳೆ ನ್ಯಾಯಾಲಯ ನಿರ್ದೇಶಿಸಿ ಆದೇಶಿಸಿದರೆ ತುಂಬಲು ತಯಾರಿ ಇರುತ್ತಾನೆಂದು ಹಾಗೂ ವಾದಪತ್ರದಲ್ಲಿ ಆರೋಪಿಸಿರುವ ಉಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಅಲ್ಲಗಳೆಯುತ್ತಾ, ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು 3 ನೇ ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**13. <u>5 ರಿಂದ 9 ನೇ ಪ್ರತಿವಾದಿಯರ ಲಿಖಿತ ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ</u>**

5 ರಿಂದ 8 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಯ ಮಕ್ಕಳು. 1 ರಿಂದ 4 ನೇ ಪ್ರತಿವಾದಿಗಳು ಸಹೋದರರು. 1 ರಿಂದ 4 ನೇ ಪ್ರತಿವಾದಿಗಳ ತಂದೆಯಾದ ನಾಕಿಕೆರೆ ನಾಗೇಂದ್ರಪ್ಪನು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಮಲಸಿಂಗನಹಳ್ಳಿ ಗ್ರಾಮಕ್ಕೆ ವಲಸೆ ಬಂದಿರುತ್ತಾನೆ. ಮಲಸಿಂಗನಹಳ್ಳಿ ಗ್ರಾಮಕ್ಕೆ ವಲಸೆ ಬಂದ ನಂತರ, ಪ್ರತಿವಾದಿಗಳು ಮತ್ತು 1 ರಿಂದ 4 ನೇ ಪ್ರತಿವಾದಿಗಳ ತಂದೆ ದಾವಾ ಆಸ್ತಿಯ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸಮನಾದ ಹಿಸ್ಸೆಯನ್ನು ಹೊಂದಿರುತ್ತಾರೆ. 5 ರಿಂದ 9 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಯ ¼ ಹಿಸ್ಸೆಯಲ್ಲಿ ಸಮನಾದ ಹಿಸ್ಸೆಯ ಹಕ್ಕನ್ನು ದಾವಾ ಆಸ್ತಿಯಲ್ಲಿ ಹೊಂದಿರುತ್ತಾರೆ. 5 ರಿಂದ 9 ನೇ ಪ್ರತಿವಾದಿಗಳು ಇಂದಿನವರೆಗೂ ದಾವಾ ಆಸ್ತಿಯಲ್ಲಿ ತಮ್ಮ ಹಕ್ಕು, ಹಿತಾಸಕ್ತಿ ಹಾಗೂ ಸ್ವಾಧೀನತೆಯನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ. ದಾವಾ ಆಸ್ತಿಯು ಕೆರೆಯ ಹತ್ತಿರದಲ್ಲಿದ್ದು, ನೀರಿನ ಸೌಲಭ್ಯವನ್ನು ಹೊಂದಿದ್ದು ಮತ್ತು ಮ್ಯಾಂಗನೀಸ್ ಖನಿಜವನ್ನು ಹೊಂದಿದ ಫಲವತ್ತಾದ ಜಮೀನು ಇರುತ್ತದೆ. ದಾವಾ ಆಸ್ತಿಯ ಸುತ್ತಲು ಅಡಿಕೆ ಮತ್ತು ತೆಂಗಿನ ತೋಟಗಳು ಇರುತ್ತವೆ. ಇದು ಒಂದೇ ಪಿತ್ರಾರ್ಜಿತವಾದ ಆಸ್ತಿಯನ್ನು ತಾತ ಬಿಟ್ಟುಹೋಗಿರುತ್ತಾನೆ. ಆದ್ದರಿಂದ, ದಾವಾ ಆಸ್ತಿಯನ್ನು ದಿನಾಂಕಃ 04-04-2019 ರ ಆರೋಪಿತ ಕ್ರಯದ ಕರಾರು ಪತ್ರದಲ್ಲಿ ಹೇಳಿದಂತಹ ಕಡಿಮೆಯ ಮೊತ್ತಕ್ಕೆ ಮಾರಾಟ ಮಾಡಲು ಸಾಧ್ಯವಿಲ್ಲ. ಏಕೆಂದರೆ, ದಾವಾ ಆಸ್ತಿಯು ಅತಿ ಹೆಚ್ಚು ಬೆಲೆಬಾಳುವ ಆಸ್ತಿಯಾಗಿದ್ದರಿಂದ, ಅದನ್ನು ಕಡಿಮೆ ಮೊತ್ತಕ್ಕೆ ಮಾರಾಟ ಮಾಡುವ ಪ್ರಶ್ನೆಯೇ ಇರುವುದಿಲ್ಲ. ದಾವಾ ಆಸ್ತಿಯಲ್ಲಿ 5 ರಿಂದ 9 ನೇ ಪ್ರತಿವಾದಿಗಳ ಹಿತಾಸಕ್ತಿಯನ್ನು ಹೊಂದಿದ್ದು, ಅದನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ

ಕುಟುಂಬಕ್ಕೆ ಇರುವುದಿಲ್ಲ. ಉಳಿದ 1,2 ಮತ್ತು 4 ನೇ ಪ್ರತಿವಾದಿಗಳು ವಾದಿಯೊಂದಿಗೆ ಹಣಕಾಸಿನ ವ್ಯವಹಾರವನ್ನು ಹೊಂದಿದ್ದು ಮತ್ತು 3 ನೇ ಪ್ರತಿವಾದಿಯು ಸೌಮ್ಯ ಸ್ವಭಾವದವನು ಇರುವುದರ ದುರುಪಯೋಗವನ್ನು ಪಡೆದು ದಿನಾಂಕಃ 04-04-2019 ರಂದು ಕ್ರಯದ ಕರಾರು ಪತ್ರವನ್ನು ವಾದಿಯ ಪರ ಸೃಷ್ಟಿ ಮಾಡಿರುತ್ತಾರೆ. ಆದ್ದರಿಂದ, ವಾದಿ ದಾವೆಯಲ್ಲಿ ಕೇಳಿದಂತೆ ಯಾವುದೇ ಪರಿಹಾರವನ್ನು ಪಡೆಯಲು ಅರ್ಹಳಾಗಿರುವುದಿಲ್ಲ. ವಾದಿಯ ಪರ 1 ರಿಂದ 4 ನೇ ಪ್ರತಿವಾದಿಗಳು ಬರೆದುಕೊಟ್ಟ ಆಪಾದಿತ ಕ್ರಯದ ಕರಾರು ಪತ್ರವು ಕಾನೂನು ಬಾಹಿರವಾಗಿದ್ದು, ಅದು ದಾವಾ ಆಸ್ತಿಯಲ್ಲಿ 5 ರಿಂದ 9 ನೇ ಪ್ರತಿವಾದಿಗಳ ಹಕ್ಕು ಹಾಗೂ ಹಿತಾಸಕ್ತಿಗೆ ಬಾಂದಾಯಿಸುವುದಿಲ್ಲ. 5 ರಿಂದ 9 ನೇ ಪ್ರತಿವಾದಿಗಳು ವಾದಿಗೆ ಆಪಾದಿತ ಕ್ರಯದ ಮೊತ್ತವನ್ನು ಸಂದಾಯ ಮಾಡಿ, ದಾವಾ ಆಸ್ತಿಯನ್ನು ಖರೀದಿಸಲು ತಯಾರಿ ಇರುತ್ತಾರೆ. 5 ರಿಂದ 9 ನೇ ಪ್ರತಿವಾದಿಗಳ ಕುಟುಂಬ ದೊಡ್ಡ ಕುಟುಂಬವಾಗಿದ್ದರಿಂದ, ಅವರ ಜೀವನೋಪಯಕ್ಕಾಗಿ ದಾವಾ ಆಸ್ತಿಯು ಅವಶ್ಯವಾಗಿರುತ್ತದೆ. ಆಪಾದಿತ ಕ್ರಯದ ಕರಾರು ಪತ್ರದ ಬಗ್ಗೆ ಗೊತ್ತಾದ ನಂತರ ದಾಖಲೆಗಳನ್ನು ಪರಿಶೀಲಿಸಿ, ದಾವಾ ಆಸ್ತಿಯಲ್ಲಿ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಹಾಗೂ ಪೂರ್ವ ಕ್ರಯದ ಹಕ್ಕಿನ ಮೇಲೆ ಮೂಲ ದಾವೆ ನಂ-336/2019 ನ್ನು ಹೊಸದುರ್ಗದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಲ್ಲಿ ಸಲ್ಲಿಸಿದ್ದು, ಸದರಿ ಕೇಳು ಈ ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ಬಂದಿರುತ್ತದೆ. 5 ರಿಂದ 9 ನೇ ಪ್ರತಿವಾದಿಗಳ ತಾತ ತನ್ನ ಕುಟುಂಬದೊಂದಿಗೆ ಮಲಸಿಂಗನಹಳ್ಳಿ ಗ್ರಾಮಕ್ಕೆ ಮನೆ ಅಳಿಯನಾಗಿ ತನ್ನ ಹೆಂಡತಿಯ ಆಸ್ತಿಗಳನ್ನು ನೋಡಿಕೊಳ್ಳಲು ನೆಲಸಿದ್ದು ಮತ್ತು ತನ್ನ ಹೆಂಡತಿಯ ಆಸ್ತಿಗಳಿಂದ ಬಂದ ಆದಾಯದಿಂದ ಕೆಲವು ಆಸ್ತಿಗಳನ್ನು ಸಂಪಾದಿಸಿರುತ್ತಾನೆ. ದಾವಾ ಆಸ್ತಿಯನ್ನು ಹೊರತುಪಡಿಸಿ, ಮಲಸಿಂಗನಹಳ್ಳಿಯಲ್ಲಿರುವ ಎಲ್ಲಾ ಆಸ್ತಿಗಳು ಸ್ತ್ರಿಧನ ಆಸ್ತಿಗಳಾಗಿದ್ದು,

ಅವುಗಳನ್ನು 1 ರಿಂದ 4 ನೇ ಪ್ರತಿವಾದಿಗಳು ಮೌಖಿಕವಾಗಿ ಪಾಲುವಿಭಾಗ ಮಾಡಿಕೊಂಡು ಖಾತೆಯನ್ನು ಮಾಡಿಸಿಕೊಂಡು, ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆಂದು ಹಾಗೂ ವಾದಪತ್ರದಲ್ಲಿ ಆರೋಪಿಸಿರುವ ಉಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಅಲ್ಲಗಳೆಯುತ್ತಾ, ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು 5 ರಿಂದ 9 ನೇ ಪ್ರತಿವಾದಿಗಳು ಪ್ರಾರ್ಥಿಸಿಕೊಂಡಿರುತ್ತಾರೆ.

**14.** ಎರಡು ಪ್ರಕರಣಗಳ ವಾದ ಪತ್ರಗಳು, ಲಿಖಿತ ಹೇಳಿಕೆಗಳು ಮತ್ತು ದಾಖಲೆಗಳನ್ನು ಅವಲೋಕಿಸಿ, ಈ ನ್ಯಾಯಾಲಯವು ಈ ಕೆಳಕಂಡ ವಿವಾದಾಂಶಗಳನ್ನು ಮತ್ತು ಹೆಚ್ಚುವರಿ ವಿವಾದಾಂಶವನ್ನು ರಚಿಸಿರುತ್ತದೆ.

**ಅಸಲು ದಾವಾ ಸಂಖ್ಯೆ-16/2020 ರ ವಿವಾದಾಂಶಗಳು**

1. Whether plaintiffs proves that, the registered sale agreement dated 04-04-2019 executed by defendant No.1 to 4 in favour of defendant No.5 in respect of suit schedule property does not bind their right of share in the suit property?

2. Whether defendant No.5 proves that defendant No.1 to 4 have agreed to sell the suit schedule property under registered sale agreement dated 04-04-2019 for family/legal necessity?

3. Whether plaintiffs are entitled to the relief of declaration, partition and separate possession of their legitimate share in suit schedule properties and other reliefs as prayed for?

4. What order or decree?

**ಅಸಲು ದಾವಾ ಸಂಖ್ಯೆ-29/2019 ರ ವಿವಾದಾಂಶಗಳು**

**1.** Whether plaintiff proves that, he has always been ready and willing to perform his part of contract?

**2.** Whether plaintiff is entitled to the reliefs as prayed for?

**3.** What order or decree?

**ADDITIONAL ISSUE**

1. Whether plaintiff proves the defendants have executed sale registered agreement on 04-04-2019 in his favour having agreed to sell the suit property for consideration of Rs.10,80,000/- by receiving advance of Rs.4,60,000/-, agreeing to execute register sale deed within 3 months after receiving balance consideration amount?

**15.** ಅಸಲು ದಾವಾ ಸಂಖ್ಯೆ 16/2020 ರಲ್ಲಿನ ವಾದಪತ್ರದಲ್ಲಿ ಆರೋಪಿಸಿರುವ ಅಂಶಗಳನ್ನು ಸಾಭೀತುಪಡಿಸಲು 1 ನೇ ವಾದಿ ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ಒಬ್ಬ ಸಾಕ್ಷಿದಾರನನ್ನು ಪಿ.ಡಬ್ಲೂ-2 ಎಂದು ವಿಚಾರಣೆಗೆ ಒಳಪಡಿಸಿಕೊಂಡು, 57 ದಾಖಲೆಗಳನ್ನು ನಿಪಿ-1 ರಿಂದ 57 ಎಂದು ಗುರುತಿಸಿಕೊಂಡು ತಮ್ಮ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ.

**16.** ಲಿಖಿತ ಹೇಳಿಕೆಗಳಲ್ಲಿ ಆರೋಪಿಸಿರುವ ಅಂಶಗಳನ್ನು ಸಾಭೀತುಪಡಿಸಲು, ಅಸಲು ದಾವಾ ಸಂಖ್ಯೆ-16/2020 ರಲ್ಲಿನ 2 ನೇ ಪ್ರತಿವಾದಿ ತಾನು ಡಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, 5 ನೇ ಪ್ರತಿವಾದಿಯ ಪರ ವಕೀಲರು ಪಿ.ಡಬ್ಲೂ-1 ರವರ ಪಾಟಿಸವಾಲಿನಲ್ಲಿ 1 ದಾಖಲೆಯನ್ನು ಸಾಕ್ಷಿಗೆ ತೋರಿಸಿದಾಗ, ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ, ಸದರಿ ದಾಖಲೆಯನ್ನು 5 ನೇ ಪ್ರತಿವಾದಿಯ ಪರ ನಿಡಿ-1 ಎಂದು ಗುರುತಿಸಿರುತ್ತದೆ.

**17.** ಅಸಲು ದಾವಾ ಸಂಖ್ಯೆ 29/2019 ರಲ್ಲಿನ ವಾದಪತ್ರದಲ್ಲಿ ಆರೋಪಿಸಿರುವ ಅಂಶಗಳನ್ನು ಸಾಭೀತುಪಡಿಸಲು, ವಾದಿಯಿಂದ ಮುಕ್ತಿಯಾರನಾಮೆ ಪಡೆದ ಅವಳ ಗಂಡನಾದ ಕೆ.ಸಿ ಗುರುಸಿದ್ದಪ್ಪ ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ಇಬ್ಬರು ಸಾಕ್ಷಿದಾರರನ್ನು ಪಿ.ಡಬ್ಲೂ-2 ಮತ್ತು 3 ಎಂದು ವಿಚಾರಣೆಗೆ ಒಳಪಡಿಸಿಕೊಂಡು, 8 ದಾಖಲೆಗಳನ್ನು ನಿಪಿ-1 ರಿಂದ 8 ಎಂದು ಗುರುತಿಸಿಕೊಂಡು ವಾದಿಯ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾನೆ.

**18.** ಎರಡು ಪ್ರಕರಣಗಳ ವಾದಿಯರ ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು.

**19.** ಎರಡು ಪ್ರಕರಣಗಳ ವಾದಪತ್ರಗಳು, ಲಿಖಿತ-ಹೇಳಿಕೆಗಳು ಮತ್ತು ಉಭಯ ಪಕ್ಷಗಾರರ ಪರ ಇರುವಂತಹ ಮೌಖಿಕ ಹಾಗೂ ದಾಖಲಾತಿ ಸಾಕ್ಷಿ ಹಾಗೂ ಎರಡು ಪ್ರಕರಣಗಳ ವಸ್ತು-ಸ್ಥಿತಿ ಮತ್ತು ಸಂದರ್ಭಗಳನ್ನು ಅವಲೋಕಿಸಿ, ಮೇಲಿನ ವಿವಾದಾಂಶಗಳಿಗೆ ಮತ್ತು ಹೆಚ್ಚುವರಿ ವಿವಾದಾಂಶಕ್ಕೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

**ಅಸಲು ದಾವಾ ಸಂಖ್ಯೆ-16/2020 ರಲ್ಲಿ**

ವಿವಾದಾಂಶ -1 - ಸಕಾರಾತ್ಮಕ
ವಿವಾದಾಂಶ -2 - ಸಕಾರಾತ್ಮಕ
ವಿವಾದಾಂಶ -3 - ನಕಾರಾತ್ಮಕ
ವಿವಾದಾಂಶ -4 - ಅಂತಿಮ ಆದೇಶದಂತೆ

**ಮತ್ತು ಅಸಲು ದಾವಾ ಸಂಖ್ಯೆ-29/2019 ರಲ್ಲಿ**

ವಿವಾದಾಂಶ -1 - ನಕಾರಾತ್ಮಕ
ವಿವಾದಾಂಶ -2 - ಭಾಗಶಃ ಸಕಾರಾತ್ಮಕ

ವಿವಾದಾಂಶ -3 - ಅಂತಿಮ ಆದೇಶದಂತೆ

ಹೆ. ವಿವಾದಾಂಶ-1 ಸಕಾರಾತ್ಮಕ

## ಕಾರಣಗಳು

**20. ಮೂಲ ದಾವೆ ನಂ-16/2020 ರಲ್ಲಿನ ವಿವಾದಾಂಶ-2 ಹಾಗೂ ಮೂಲ ದಾವೆ ನಂ-29/2019 ರಲ್ಲಿನ ವಿವಾದಾಂಶ-1 ಮತ್ತು ಹೆಚ್ಚುವರಿ ವಿವಾದಾಂಶ-1-** ಈ ಮೂರು ವಿವಾದಾಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡು ಬಂದರೂ ಸಹ, ಆಂತರಿಕವಾಗಿ ಒಂದೊಕ್ಕೊಂದು ಸಂಬಂಧ ಹೊಂದಿರುವುದರಿಂದ, ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಗಿದೆ.

ಮೂಲ ದಾವೆ ನಂ-16/2020 ಹಾಗು ಮೂಲ ದಾವೆ ನಂ-29/2019 ರಲ್ಲಿನ 1 ರಿಂದ 4 ನೇ ಪ್ರತಿವಾದಿಗಳು ಸ್ವಂತ ಸಹೋದರರು ಎನ್ನುವುದು ನಿರ್ವಿವಾದವಾದ ಸಂಗತಿ. ಅದೇ ರೀತಿ ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ಸದರಿ ದಾವೆಯ 3 ನೇ ಪ್ರತಿವಾದಿಯ ಮಕ್ಕಳು ಎನ್ನುವುದು ನಿರ್ವಿವಾದವಾದ ಸಂಗತಿ. ಅಲ್ಲದೆ, ದಾವಾ ತಪಶೀಲಿನ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ಮಾಲಿಕತ್ವ ಮತ್ತು ಜಂಟಿ ಸ್ವಾಧೀನಾನುಭವಕ್ಕೆ ಒಳಪಟ್ಟು, ಜಂಟಿ ಖಾತೆ ಇರುವುದು ಸಹ ನಿರ್ವಿವಾದವಾದ ಸಂಗತಿ.

**21**. ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ತಮ್ಮ ವಾದಪತ್ರದಲ್ಲಿ, ದಾವಾ ಆಸ್ತಿಯು 1 ರಿಂದ 4 ನೇ ಪ್ರತಿವಾದಿಯರ ತಂದೆಯಾದ ಮೃತ ರಂಗಪ್ಪನಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ಪ್ರತಿವಾದಿಗಳ ತಂದೆ ಮರಣ ಹೊಂದಿದ ಮೇಲೆ ವಾರಸುದಾರಿಕೆಯ ಮೇಲೆ ಪ್ರತಿವಾದಿಯರಿಗೆ ಬಂದಿದ್ದು, ವಾದಿಯರು ಮತ್ತು 1 ರಿಂದ 4 ನೇ ಪ್ರತಿವಾದಿಯರು ಹಿಂದು ಅವಿಭಕ್ತಕುಟುಂಬದ ಸದಸ್ಯರಾಗಿ ದಾವಾ ಸ್ವತ್ತಿನಲ್ಲಿ ಹಕ್ಕನ್ನು ಹೊಂದಿರುವುದಾಗಿ ಆರೋಪಿಸಿದ್ದು, ಅದರಂತೆ 1 ನೇ ವಾದಿ ತಾನು

ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ ವಾದಪತ್ರದ ಅಂಶಗಳಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ.

**22**. ಮೂಲ ದಾವೆ ನಂ-29/2019 ರಲ್ಲಿನ ವಾದಿ ತನ್ನ ವಾದಪತ್ರದಲ್ಲಿ, ದಿನಾಂಕ-04-04-2019 ರಂದು 1 ರಿಂದ 4 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು 10,80,000/- ರೂಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ, ಮುಂಗಡವಾಗಿ 4,60,000/- ರೂಗಳನ್ನು ಪಡೆದುಕೊಂಡು, ಉಳಿದ 6,20,000/- ರೂಗಳನ್ನು 3 ತಿಂಗಳ ಒಳಗೆ ಪಡೆದು, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವುದಾಗಿ ಒಪ್ಪಿ, ಸಾಕ್ಷಿದಾರರ ಸಮಕ್ಷಮ ನೊಂದಾಯಿತ ಕ್ರಯದ ಕರಾರುಪತ್ರವನ್ನು ವಾದಿಯ ಪರ ಬರೆದುಕೊಟ್ಟಿರುತ್ತಾರೆ ಎಂದು ಆರೋಪಿಸಿರುವಂತಹ ಅಂಶಗಳನ್ನು ಸಾಭೀತುಪಡಿಸಲು, ವಾದಿಯಿಂದ ಮುಕ್ತಿಯಾರನಾಮೆ ಪಡೆದ, ಅವಳ ಗಂಡನಾದ ಕೆ.ಸಿ. ಗುರುಸಿದ್ದಪ್ಪ ಇವನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ ವಾದಪತ್ರದ ಅಂಶಗಳಿಗೆ ಹಾಗೂ ಮೂಲ ದಾವೆ ನಂ-16/2020 ರಲ್ಲಿನ 5 ನೇ ಪ್ರತಿವಾದಿಯ ಲಿಖಿತ ಹೇಳಿಕೆಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ.

**23**. ಎರಡೂ ಪ್ರಕರಣಗಳಲ್ಲಿನ 3 ನೇ ಪ್ರತಿವಾದಿಯ ಅಂಜಿನಪ್ಪ ಇವನು ತನ್ನ ಲಿಖಿತ ಹೇಳಿಕೆಗಳಲ್ಲಿ, 1, 2 ಮತ್ತು 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯ ಗಂಡನೊಂದಿಗೆ ಹಣದ ಬಗ್ಗೆ ವ್ಯವಹಾರ ಮಾಡಿಕೊಂಡಿದ್ದ ಕಾರಣದಿಂದ ಅದರ ಭದ್ರತೆಯ ಸಲುವಾಗಿ 5 ನೇ ಪ್ರತಿವಾದಿಯ ಹೆಸರಿಗೆ ಕ್ರಯದ ಕರಾರುಪತ್ರವನ್ನು ನೊಂದಣಿ ಮಾಡಿಸಲು ತನ್ನ ಸಹಿಯನ್ನು ಪಡೆದುಕೊಂಡಿದ್ದು, ಆದರೆ ಯಾವುದೆ ಪ್ರತಿಫಲದ ಹಣವನ್ನು ತಾನು ಪಡೆದುಕೊಂಡಿಲ್ಲ ಹಾಗೂ ದಾವಾ ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿ,ಕ್ರಯದ ಕರಾರು ಪತ್ರವನ್ನು ಉಳಿದ ಪ್ರತಿವಾದಿಗಳೊಂದಿಗೆ ಸೇರಿ ಬರೆದುಕೊಟ್ಟಿಲ್ಲವೆಂದು ಆರೋಪಿಸಿದ್ದು, ಆದರೆ ಆ ಕುರಿತು ಯಾವುದೇ ಸಾಕ್ಷಿ 3 ನೇ

ಪ್ರತಿವಾದಿಯ ಪರ ಎರಡೂ ಪ್ರಕರಣಗಳಲ್ಲಿ ಇರುವುದಿಲ್ಲ.

**24**. ಎರಡೂ ಪ್ರಕರಣಗಳಲ್ಲಿ 2 ನೇ ಪ್ರತಿವಾದಿಯು ಸಲ್ಲಿಸಿರುವ ತನ್ನ ಲಿಖಿತ ಹೇಳಿಕೆಗಳಲ್ಲಿ, ದಿನಾಂಕಃ 04-04-2019 ರಂದು ದಾವಾ ಆಸ್ತಿಯನ್ನು 10,80,000/- ರೂಗಳಿಗೆ ಮೂಲ ದಾವೆ ನಂ-29/2019 ರಲ್ಲಿನ ವಾದಿಯಾದ ಕೆ.ಎಸ್. ಆಶಾ ಇವಳಿಗೆ ಮಾರಾಟ ಮಾಡುವುದಾಗಿ ಒಪ್ಪಿ, ಮುಂಗಡವಾಗಿ 4,60,000/- ರೂಗಳನ್ನು ವಾದಿಯಿಂದ 1 ರಿಂದ 4 ನೇ ಪ್ರತಿವಾದಿಗಳು ಪಡೆದುಕೊಂಡು ನೊಂದಾಯಿತ ಕ್ರಯದ ಕರಾರು ಪತ್ರವನ್ನು ವಾದಿಯ ಪರ ಬರೆದುಕೊಟ್ಟಿರುತ್ತದೆ ಎಂದು ಆರೋಪಿಸಿರುವಂತಹ ಅಂಶಗಳನ್ನು ಸಾಭೀತುಪಡಿಸಲು, ಸದರಿ 2 ನೇ ಪ್ರತಿವಾದಿಯು ಮೂಲ ದಾವೆ ನಂ-16/2020 ರಲ್ಲಿ ಡಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ ಲಿಖಿತ ಹೇಳಿಕೆಗಳ ಅಂಶಗಳಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ.

**25**. ಮೂಲ ದಾವೆ ನಂ-16/2020 ರಲ್ಲಿನ ವಾದಿಗಳ ಮತ್ತು ಮೂಲ ದಾವೆ ನಂ-29/2019 ರಲ್ಲಿನ 5 ರಿಂದ 9 ನೇ ಪ್ರತಿವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಮೂಲ ದಾವೆ ನಂ-29/2019 ರಲ್ಲಿನ ವಾದಿಯ ಗಂಡ ಜಿ.ಪಿ.ಎ ಮೂಲಕ ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಆದರೆ ಕ್ರಯದ ಕರಾರಿನ ವ್ಯವಹಾರದ ಬಗ್ಗೆ ಪಿ.ಡಬ್ಲೂ-1 ರವರಿಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಲ್ಲದೆ, ನಿರ್ದಿಷ್ಟ ಕ್ರಯದ ಕರಾರಿನ ಅನುಸ್ಠಾನ ಕೋರಿ ಸಲ್ಲಿಸಿದ ದಾವೆಗಳಲ್ಲಿ, ಕ್ರಯದ ಕರಾರು ಪತ್ರ ಯಾರ ಪರವಾಗಿ ಇರುತ್ತದೆಯೋ ಅಂತಹ ವಕ್ತಿಗಳೇ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬೇಕು ವಿನಃ, ಅಂತಹ ವ್ಯಕ್ತಿಗಳ ಪರವಾಗಿ ಮುಕ್ತಿಯಾರನಾಮೆಯ ಮೂಲಕ ಸಾಕ್ಷಿ ಹೇಳಲು ಬರುವುದಿಲ್ಲ. ಏಕೆಂದರೆ, ಅವರಿಗೆ ಕ್ರಯದ ಕರಾರಿನ ವ್ಯವಹಾರದ

ಬಗ್ಗೆ ಹಾಗೂ ಕ್ರಯಕ್ಕೆ ತೆಗೆದುಕೊಳ್ಳುವವರು ತಮ್ಮ ಭಾಗದ ಕ್ರಯದ ಕರಾರಿನಂತೆ ನಡೆದುಕೊಳ್ಳು ಸದಾ ತಯಾರಿ ಹಾಗೂ ಇಚ್ಚೆ ಉಳ್ಳವರು ಅಥವಾ ಇಲ್ಲ ಎನ್ನುವುದು ಅವರಿಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ, ಅಸಲು ದಾವಾ ಸಂಖ್ಯೆ 29/2019 ರಲ್ಲಿನ ವಾದಿಯೇ ನ್ಯಾಯಾಲಯಕ್ಕೆ ಸ್ವತಃ ಹಾಜರಾಗಿ ಸಾಕ್ಷಿಯನ್ನು ನುಡಿಯಬೇಕು ಅಲ್ಲದೆ, ಮೂಲ ದಾವೆ ನಂ-29/2019 ರಲ್ಲಿ ನಿಪಿ-1 ಎಂದು ಗುರುತಿಸಿಕೊಂಡಂತಹ ಜಿ.ಪಿ.ಎ ದಲ್ಲಿರುವ ಸಹಿ ಹಾಗೂ ಮೂಲ ದಾವೆ ನಂ-29/2019 ರ ವಾದಪತ್ರದಲ್ಲಿರುವ ವಾದಿಯಾದ ಕೆ. ಎಸ್. ಆಶಾ ಇವಳ ಸಹಿಗಳು ಬೇರೆ ಬೇರೆ ಇದ್ದು, ಸದರಿ ಆಶಾ ಇವಳು ನಿಪಿ-1 ರಂತೆ ತನ್ನ ಗಂಡನಿಗೆ ಜಿ.ಪಿ.ಎ ಬರೆದುಕೊಟ್ಟಿಲ್ಲ. ಅಲ್ಲದೆ, ಈ ಮೂಲ ದಾವೆ ನಂ-29/2019 ನ್ನು ಸಲ್ಲಿಸಿರುವುದು ಸದರಿ ಆಶಾ ಇವಳಿಗೆ ಗೊತ್ತಿರುವುದಿಲ್ಲ. ಅವಳ ಗಂಡನು ಅವಳಿಗೆ ಗೊತ್ತಿಲ್ಲದ ಹಾಗೆ ದಾವೆಯನ್ನು ಸಲ್ಲಿಸಿರುತ್ತಾನೆ. ಅಲ್ಲದೆ, ದಾವಾ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳಲು ಸದರಿ ಆಶಾ ಇವಳಿಗೆ ಯಾವುದೇ ಆದಾಯದ ಮೂಲ ಇಲ್ಲ ಎನ್ನುವುದನ್ನು ಅವಳ ಗಂಡನಾದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ ಒಪ್ಪಿಕೊಂಡಿರುತ್ತಾನೆ. ಅಲ್ಲದೆ, ದಾವಾ ಆಸ್ತಿಯು 3 ನೇ ಪ್ರತಿವಾದಿಯ ಮಕ್ಕಳಾದ ಮೂಲ ದಾವೆ ನಂ-16/2020 ರಲ್ಲಿನ ವಾದಿಗಳಿಗೆ ಪಿತ್ರಾರ್ಜಿತವಾದ ಆಸ್ತಿಯಾಗಿದ್ದು, ಈ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಪಿತ್ರಾರ್ಜಿತವಾದ ಆಸ್ತಿ ಅವರ ಕುಟುಂಬಕ್ಕೆ ಇಲ್ಲ. ಆದ್ದರಿಂದ, 3 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ, ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿಲ್ಲ. ಅಲ್ಲದೆ, 3 ನೇ ಪ್ರತಿವಾದಿ ಕ್ರಯದ ಕರಾರಿನ ಮುಂಗಡ ಮೊತ್ತವನ್ನು ಪಡೆದುಕೊಂಡಿಲ್ಲ. ಅಲ್ಲದೆ, 3 ನೇ ಪ್ರತಿವಾದಿ ಕ್ರಯದ ಹಣವನ್ನು ಪಡೆದಿಲ್ಲ ಎನ್ನುವುದನ್ನು ಮೂಲ ದಾವೆ ನಂ-16/2020 ರಲ್ಲಿ ಡಿ.ಡಬ್ಲೂ-1 ಎಂದು ಸಾಕ್ಷಿ ನುಡಿದ 2 ನೇ ಪ್ರತಿವಾದಿಯು ತನ್ನ ಪಾಟಿಸವಾಲಿನಲ್ಲಿ

ಒಪ್ಪಿಕೊಂಡಿರುತ್ತಾನೆ. ಆದ್ದರಿಂದ, ದಾವಾ ಆಸ್ತಿಯಲ್ಲಿ ಮೂಲ ದಾವೆ ನಂ-16/2020 ರಲ್ಲಿನ ವಾದಿಗಳಿಗೆ ಹಿಸ್ಸೆಯ ಹಕ್ಕು ಇದ್ದು, ವಾದಿಗಳು ಆರೋಪಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ. ಆದ್ದರಿಂದ, ಸದರಿ ಕ್ರಯದ ಕರಾರುಪತ್ರ ವಾದಿಗಳ ಹಿಸ್ಸೆಯ ಹಕ್ಕಿಗೆ ಬಾಂದಾಯಿಸುವುದಿಲ್ಲ. ಅಲ್ಲದೆ, ಮೂಲ ದಾವೆ ನಂ-29/2019 ರಲ್ಲಿನ ವಾದಿಯಾದ ಆಶಾ ಇವಳು ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ತಾನು ಸದಾ ತಯಾರಿ ಮತ್ತು ಇಚ್ಛೆವುಳ್ಳವಳು ಎನ್ನುವುದನ್ನು ಸಾಭೀತುಪಡಿಸಿಲ್ಲ. ಏಕೆಂದರೆ, ನಿಪಿ-2 ಕ್ರಯದ ಕರಾರು ಪತ್ರದ ಪ್ರಕಾರ ಕ್ರಯದ ಉಳಿದ ಮೊತ್ತ 6,20,000/- ರೂಗಳನ್ನು ಕರಾರಿನ ದಿನಾಂಕದಿಂದ 3 ತಿಂಗಳ ಒಳಗಾಗಿ ವಾದಿ ಪಾವತಿಸತಕ್ಕದ್ದು ಎಂಬ ಷರತ್ತು ಇರುತ್ತದೆ. ಸದರಿ ಷರತ್ತಿನಂತೆ ವಾದಿಯು ಕ್ರಯದ ಕರಾರುಪತ್ರ ಆದ 3 ತಿಂಗಳ ಒಳಗಾಗಿ ಕ್ರಯದ ಉಳಿದ ಮೊತ್ತವನ್ನು ಪಾವತಿಸಿ, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವಂತೆ 1 ರಿಂದ 4 ನೇ ಪ್ರತಿವಾದಿಗಳನ್ನು ಕೇಳಿಲ್ಲ. ಬದಲಾಗಿ, ನಿಪಿ-4 ರಂತೆ ದಿನಾಂಕಃ 04-07-2019 ಕ್ಕೆ ನೋಟೀಸನ್ನು ಕೊಟ್ಟ ಕಾರಣ, ವಾದಿ ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ತಾನು ಸದಾ ತಯಾರಿ ಹಾಗು ಇಚ್ಛೆವುಳ್ಳವಳು ಎನ್ನುವುದನ್ನು ಸಾಭೀತುಪಡಿಸಿಲ್ಲವೆಂದು ತಮ್ಮ ವಾದವನ್ನು ಮಂಡಿಸುತ್ತಾ, ಮಾನ್ಯ ಸರ್ವೋಚ್ಚನ್ಯಾಯಾಲಯ ಹಾಗೂ ಮಾನ್ಯ ಉಚ್ಚನ್ಯಾಯಾಲಯಗಳ ನಿರ್ಧರಿತ ಪ್ರಕರಣಗಳಾದ-

1.Civil Appeal No.7840/2023 (Rajesh Kumar V.s Anand Kumar and others)
2. AIR 1996 SC 116(N.P Thirugnanam (D) by LRs V/s Dr. R Jagan Mohan Rao and others)
3. AIR 2006 MP 155(DB) (Leeladhar Yadav V.s Siddhartha Housing Co-operative Society Ltd.,)

4.AIR 2006 AP 405 (P. Prabhakar Rao and another V.s Y. Venkata Mohan Rao)

5.2019 (3) KCCR SN 194 (SC)(Arshnoor Singh V.s Harpal Kaur and others)

ಗಳನ್ನು ಆಧರಿಸಿ, ಮೂಲ ದಾವೆ ನಂ-29/2019 ನ್ನು ವಜಾಗೊಳಿಸಿ, ಮೂಲ ದಾವೆ ನಂ-16/2020 ನ್ನು ಡಿಕ್ರಿಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**26**. ಮೂಲ ದಾವೆ ನಂ-29/2019 ರಲ್ಲಿನ ವಾದಿ ಮತ್ತು ಮೂಲ ದಾವೆ ನಂ-16/2020 ರಲ್ಲಿನ 5 ನೇ ಪ್ರತಿವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ಮಾಲಿಕತ್ವ ಮತ್ತು ಸ್ವಾಧೀನತೆಗೆ ಒಳಪಟ್ಟು, ಜಂಟಿ ಖಾತೆಯನ್ನು ಹೊಂದಿದ್ದು, 1 ರಿಂದ 4 ನೇ ಪ್ರತಿವಾದಿಗಳು ದಿನಾಂಕಃ04-04-2019 ರಂದು ದಾವಾ ಆಸ್ತಿಯನ್ನು 10,80,000/- ರೂಗಳಿಗೆ ವಾದಿಗೆ ಮಾರಾಟ ಮಾಡುವುದಾಗಿ ಒಪ್ಪಿ, ಸಾಕ್ಷಿದಾರರ ಸಮಕ್ಷಮ ಮುಂಗಡವಾಗಿ 4,60,000/- ರೂಗಳನ್ನು ವಾದಿಯಿಂದ ಪಡೆದು, ಉಳಿದ ಕ್ರಯದ ಮೊತ್ತ 6,20,000/- ರೂಗಳನ್ನು 3 ತಿಂಗಳಲ್ಲಿ ಪಡೆದುಕೊಂಡು, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವುದಾಗಿ ಒಪ್ಪಿ, ನಿಪಿ-2 ರಂತೆ ನೊಂದಾಯಿತ ಕ್ರಯದ ಕರಾರಪತ್ರವನ್ನು ವಾದಿಯ ಪರವಾಗಿ ಬರೆದುಕೊಟ್ಟಿರುತ್ತಾರೆ. ಅಲ್ಲದೆ, ಆ ರೀತಿ ಕ್ರಯದ ಕರಾರುಪತ್ರವನ್ನು ವಾದಿಯ ಪರವಾಗಿ 1 ರಿಂದ 4 ನೇ ಪ್ರತಿವಾದಿಗಳು ಬರೆದುಕೊಟ್ಟಿರುವುದನ್ನು 1, 2 ಮತ್ತು 4 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಗಳಲ್ಲಿ ಒಪ್ಪಿಕೊಂಡಿರುತ್ತಾರೆ. ಅಲ್ಲದೆ, 3 ನೇ ಪ್ರತಿವಾದಿಯು ನಿವೃತ್ತ ಶಿಕ್ಷಕನಾಗಿದ್ದು, ಅವನು ನಿಪಿ-2 ರಂತೆ ನೊಂದಾಯಿತ ಕ್ರಯದ ಕರಾರುಪತ್ರವನ್ನು ತನ್ನ ಉಳಿದ ಸಹೋದರರೊಂದಿಗೆ ಹೊಸದುರ್ಗ ಉಪನೊಂದಾಣಾಧಿಕಾರಿಗಳ ಕಛೇರಿಗೆ ಬಂದು,

ಸಹಿ ಹಾಗು ಹೆಬ್ಬಟ್ಟಿನ ಗುರುತನ್ನು ಹಾಕಿ ವಾದಿಯ ಪರ ಬರೆದುಕೊಟ್ಟಿರುತ್ತಾನೆ. ಅಲ್ಲದೆ, ನಿಪಿ-2 ರಲ್ಲಿ 3 ನೇ ಪ್ರತಿವಾದಿಯ ಪೋಟೊ ಇದ್ದು, ಈಗ ತನ್ನ ಮಕ್ಕಳ ಮೂಲಕ ಮೂಲ ದಾವೆ ನಂ-16/2020 ನ್ನು ಪಾಲುವಿಭಾಗಕ್ಕಾಗಿ ಸಲ್ಲಿಸಿ, ವಾದಿಯ ಪರವಾಗಿ ಕ್ರಯದ ಕರಾರುಪತ್ರದಂತೆ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ನಿರಾಕರಿಸುತ್ತಿದ್ದಾನೆ. ಅಲ್ಲದೆ, ನಿಪಿ-2 ರಲ್ಲಿರುವ 1 ರಿಂದ 4 ನೇ ಪ್ರತಿವಾದಿಗಳ ಸಹಿಯನ್ನು ಯಾವುದೇ ಪ್ರತಿವಾದಿಗಳು ಅಲ್ಲಗಳೆದಿಲ್ಲ. ಅಲ್ಲದೆ, ವಾದಿ ತನ್ನ ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ಸದಾ ತಯಾರಿ ಹಾಗೂ ಇಚ್ಚೆಯನ್ನು ಹೊಂದಿರುತ್ತಾಳೆ. ಅಲ್ಲದೆ, ವಾದಿಗೆ ಹೆಣ್ಣುಮಕ್ಕಳಿಗೆ ಇರುವ ಸಮಸ್ಯೆ ಇದ್ದ ಕಾರಣ, ಅವಳು ತನ್ನ ಗಂಡನ ಪರವಾಗಿ ಜಿ.ಪಿ.ಎ ಬರೆದುಕೊಟ್ಟಿದ್ದು, ಅದರಂತೆ ಅವಳ ಗಂಡನು ವಾದಿಯ ಪರವಾಗಿ ಸಾಕ್ಷಿ ನುಡಿದಿರುತ್ತಾನೆ. ಅಲ್ಲದೆ, ವಾದಿಯ ಗಂಡನಿಗೆ ಸದರಿ ಕ್ರಯದ ಕರಾರಿನ ಸಂಪೂರ್ಣ ಮಾಹಿತಿ ಇರುತ್ತದೆ. ಅಲ್ಲದೆ, ಗಂಡ ಮಾಡಿದ ವ್ಯವಹಾರ ಹೆಂಡತಿ ಮಾಡಿದ ಹಾಗೆ ಹೆಂಡತಿ ಮಾಡಿದ ವ್ಯವಹಾರ ಗಂಡ ಮಾಡಿದ ಹಾಗೆ ಇರುವುದರಿಂದ, ಅರ್ಧನಾರೇಶ್ವರ ಎಂಬ ತತ್ವವು ಅನ್ವಯವಾಗುತ್ತದೆ. ಅಲ್ಲದೆ, ಮೂಲ ದಾವೆ ನಂ-16/2020 ರಲ್ಲಿನ 1, 2 ಮತ್ತು 4 ನೇ ಪ್ರತಿವಾದಿಗಳ ಪರ ಸಾಕ್ಷಿ ನುಡಿದ ಡಿ.ಡಬ್ಲೂ-1 ನಿಪಿ-2 ರಂತೆ ಕ್ರಯದ ಕರಾರು ಪತ್ರವನ್ನು 1 ರಿಂದ 4 ನೇ ಪ್ರತಿವಾದಿಗಳು ದಿನಾಂಕಃ 04-04-2019 ರಂದು ವಾದಿಯ ಪರವಾಗಿ ಬರೆದುಕೊಟ್ಟು, ಮುಂಗಡವಾಗಿ 4,60,000/- ಪಡೆದುಕೊಂಡಿರುವುದನ್ನು ಒಪ್ಪಿಕೊಂಡಿರುತ್ತಾನೆ. ಅಲ್ಲದೆ, ನಿಪಿ-2 ರಂತೆ ಕ್ರಯದ ಕರಾರು ಪತ್ರವು ದಿನಾಂಕಃ 04-04-2019 ರಂದು ಆಗಿದ್ದು, ಅದರಂತೆ ಉಳಿದ ಹಣ ಪಡೆದು ನೊಂದಾಯಿತ ಕ್ರಯಪತ್ರ ಬರೆದುಕೊಡದ ಕಾರಣ, ವಾದಿ ತನ್ನ ವಕೀಲರ ಮೂಲಕ ನಿಪಿ-4 ರಂತೆ ದಿನಾಂಕಃ04-07-2019 ರಂದು 1 ರಿಂದ 4 ನೇ ಪ್ರತಿವಾದಿಗಳಿಗೆ ನೋಟೀಸನ್ನು ಕೊಟ್ಟಿದ್ದು, ಸದರಿ ನೋಟೀಸ್ ಜಾರಿಯಾಗಿದ್ದರೂ ಸಹ,

1 ರಿಂದ 4 ನೇ ಪ್ರತಿವಾದಿಗಳು ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡದ ಕಾರಣ, ವಾದಿ ಈ ನ್ಯಾಯಾಲಯದಲ್ಲಿ ದಿನಾಂಕಃ18-07-2019 ರಂದು ದಾವೆಯನ್ನು ಸಲ್ಲಿಸಿರುವುದರಿಂದ, ವಾದಿ ಕ್ರಯದ ಕರಾರಿನಂತೆ ನಡೆದುಕೊಳ್ಳಲು ಸದಾ ತಯಾರಿ ಹಾಗು ಇಚ್ಛೆವುಳ್ಳವಳಾಗಿರುತ್ತಾಳೆ. ಅಲ್ಲದೆ, ನ್ಯಾಯಾಲಯ ಅನುಮತಿಸಿದರೆ, ಕ್ರಯದ ಕರಾರಿನ ಉಳಿದ ಮೊತ್ತವನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲು ಸದಾ ತಯಾರಿ ಇರುತ್ತಾಳೆ ಎಂದು ತಮ್ಮ ವಾದವನ್ನು ಮಂಡಿಸುತ್ತಾ, ಮಾನ್ಯ ಸರ್ವೋಚ್ಚನ್ಯಾಯಾಲಯ ಹಾಗೂ ಮಾನ್ಯ ಉಚ್ಚನ್ಯಾಯಾಲಯದ ನಿರ್ಧರಿತ ಪ್ರಕರಣಗಳಾದ-

1. Civil Appeal No.---/2026 (SLP(Civil) No.32390/2025)(A shahul Hameed V/s N. Malligarjuna and others)
2. Civil Appeal No.14804/2024(SLP (C)No.18743/2022)(Parswanath Saha V/s Bandhana Modak (DAS)and others)
3. (1999) 5 SCC 77(K. Narendra V.s Riviera Apartments(P) Ltd.,)
4. Civil Revision Petition No.1739/2023 (AP)(Bysani Vijaya Bharathi V.s Tallam Rama Rathnamma)
5. Section 120 of Evidence Act,

ಗಳನ್ನು ಆಧರಿಸಿ, ವಾದಿ ಸಲ್ಲಿಸಿದ ಮೂಲ ದಾವೆ ನಂ-29/2019 ನ್ನು ಡಿಕ್ರಿಗೊಳಿಸಿ, ಮೂಲ ದಾವೆ ನಂ-16/2020 ನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**27**. ಎರಡು ಪ್ರಕರಣಗಳಲ್ಲಿ 3 ನೇ ಪ್ರತಿವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ಆಸ್ತಿಯು ಅತ್ಯಂತ ಬೆಲೆಬಾಳುವಂತಹ ಆಸ್ತಿಯಾಗಿದ್ದು, 3 ನೇ ಪ್ರತಿವಾದಿಯ ಸಹೋದರರಾದ 1, 2 ಮತ್ತು 4 ನೇ ಪ್ರತಿವಾದಿಗಳು ವಾದಿಯಾದ ಕೆ.ಎಸ್. ಆಶಾ ಇವಳ ಗಂಡನೊಂದಿಗೆ ಹಣಕಾಸಿನ ವ್ಯವಹಾರವನ್ನು ಹೊಂದಿದ್ದು, ಅದರ ಭದ್ರತೆಯ ಸಲುವಾಗಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟು ಅದನ್ನು ರದ್ದುಪಡಿಸುವುದಾಗಿ ಹೇಳಿ, 3 ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆದರೆ, 3 ನೇ ಪ್ರತಿವಾದಿ ಕ್ರಯದ ಮೊತ್ತವನ್ನು ಪಡೆದುಕೊಂಡಿಲ್ಲ. ಅಲ್ಲದೆ, ಮೂಲ ದಾವೆ ನಂ-29/2019 ರಲ್ಲಿನ ವಾದಿಯ ಪರವಾಗಿ ಸಾಕ್ಷಿ ಹೇಳಲು ಅವಳ ಗಂಡನಿಗೆ ಯಾವುದೇ ವಯಕ್ತಿಕ ಮಾಹಿತಿ ಇಲ್ಲ. ಅಲ್ಲದೆ, ವಾದಿಯು ತನ್ನ ಗಂಡನಿಗೆ ಜಿ.ಪಿ.ಎ ಯನ್ನು ಬರೆದುಕೊಟ್ಟಿಲ್ಲ ಮತ್ತು ಕ್ರಯದ ಕರಾರಿನ ವ್ಯವಹಾರದ ಬಗ್ಗೆ ವಾದಿಯ ಗಂಡನಿಗೆ ಯಾವುದೇ ಮಾಹಿತಿ ಇಲ್ಲ. ಆದ್ದರಿಂದ, ವಾದಿ ಜಿ.ಪಿ.ಎ ಬರೆದುಕೊಟ್ಟಿರುವುದನ್ನೇ ಸಾಭೀತುಪಡಿಸದ ಕಾರಣ, ವಾದಿಯ ದಾವೆ ಊರ್ಜಿತವಾಗಿರುವುದಿಲ್ಲ. ಆದ್ದರಿಂದ, ವಾದಿಯ ದಾವೆಯನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**28**. ಅಸಲು ದಾವಾ ಸಂಖ್ಯೆ-16/2020 ರಲ್ಲಿನ ವಾದಿಯರ ಪರ ನಿಶಾನೆ ಎಂದು ಗುರುತಿಸಿಕೊಂಡಂತಹ ದಾಖಲೆಗಳನ್ನು ಅವಲೋಕಿಸಲಾಗಿ, ನಿಪಿ-1 ರಿಂದ 4 ದಾವಾ ಆಸ್ತಿಯ 2016-17 ಮತ್ತು 2019-20 ನೇ ಸಾಲಿನ ಪಹಣಿ ಪತ್ರಿಕೆಗಳು ಇದ್ದು, ಅವು 1 ರಿಂದ 4 ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಇರುತ್ತವೆ. ನಿಪಿ-5 ರಿಂದ 7 ಮ್ಯುಟೇಶನ್ ರಿಜಿಸ್ಟರ್ ಪ್ರತಿಗಳು ಇರುತ್ತವೆ. ನಿಪಿ-8 ದಿನಾಂಕಃ 04-04-2019 ರ ಕ್ರಯದ ಒಪ್ಪಂದದ ಕರಾರು ಪತ್ರದ ದೃಢೀಕೃತ ನಕಲು, ನಿಪಿ-9 ವಂಶವೃಕ್ಷ, ನಿಪಿ-10

ರಿಂದ 16 ಮತ್ತು 12 (ಎ) ಜಮೀನು ಸರ್ವೇ ನಂ-26/1 ರ 1965-66 ರಿಂದ 1999-2000 ರ ಪಹಣಿ ಪತ್ರಿಕೆಗಳು ಇದ್ದು, ಅವು ಹನುಮಕ್ಕ ಗಂಡ ರಂಗಪ್ಪ ನಂತರ ನಾಗೇಂದ್ರಪ್ಪ ತಂದೆ ರಂಗಪ್ಪ ಇವರ ಹೆಸರಿನಲ್ಲಿ ಇರುತ್ತವೆ. ನಿಪಿ-17 ರಿಂದ 21 ಜಮೀನು ಸರ್ವೇ ನಂ-44/1 ರ 1965-66 ರಿಂದ 1999-2000 ರ ಪಹಣಿ ಪತ್ರಿಕೆಗಳು ಇದ್ದು, ಅವು ಹನುಮಕ್ಕ ಗಂಡ ರಂಗಪ್ಪ ನಂತರ 1 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ. ನಿಪಿ-22 ಮತ್ತು 22(ಎ) ಜಮೀನು ಸರ್ವೆ ನಂ-45/4 ರ 1975-76 ರಿಂದ 1979-80 ನೇ ಸಾಲಿನ ಪಹಣಿ ಪತ್ರಿಕೆ ಇದ್ದು, ಅದು ಹನುಮಕ್ಕ ತಂದೆ ಸಣ್ಣಹುಚ್ಚಪ್ಪ ಇವಳ ಹೆಸರಿನಲ್ಲಿ ಇರುತ್ತದೆ. ನಿಪಿ-23 ರಿಂದ 28 ಮತ್ತು 24(ಎ), 25(ಎ), ಜಮೀನು ಸರ್ವೇ ನಂ-29/3 ರ 1965-66 ರಿಂದ 1999-2000 ರ ಪಹಣಿ ಪತ್ರಿಕೆಗಳು ಇದ್ದು, ಅವು ಹನುಮಕ್ಕ ಗಂಡ ರಂಗಪ್ಪ ನಂತರ ಶರಣಪ್ಪ ತಂದೆ ರಂಗಪ್ಪ ಇವರ ಹೆಸರಿನಲ್ಲಿ ಇರುತ್ತವೆ. ನಿಪಿ-29 ರಿಂದ 35 ಜಮೀನು ಸರ್ವೇ ನಂ-2/2 ರ 1965-66 ರಿಂದ 1999-2000 ರ ಪಹಣಿ ಪತ್ರಿಕೆಗಳು ಇದ್ದು, ಅವು ರಂಗಪ್ಪ ನಾಕಿಕೆರೆ ನಂತರ 2 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ. ನಿಪಿ-36 ಮತ್ತು 37 ಜಮೀನು ಸರ್ವೇ ನಂ-120/1 ರ 1990-91 ರಿಂದ 1999-2000 ರ ಪಹಣಿ ಪತ್ರಿಕೆಗಳು ಇದ್ದು, ಅವು 2 ಮತ್ತು 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ. ನಿಪಿ-38 ರಿಂದ 41 ಜಮೀನು ಸರ್ವೇ ನಂ-149/3 ರ 1980-81 ರಿಂದ 1999-2000 ರ ಪಹಣಿ ಪತ್ರಿಕೆಗಳು ಇದ್ದು, ಅವು 2 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ. ನಿಪಿ-42 ಮುಟೇಶನ್ ರಿಜಿಸ್ಟರ್ ನಕಲು ಇರುತ್ತದೆ, ನಿಪಿ-43 ಜಮೀನು ಸರ್ವೇ ನಂ-26/1 ರ 2002-03 ರ ಪಹಣಿ ಪತ್ರಿಕೆ ಇದ್ದು, ಅದು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಿಪಿ-44 ಜಮೀನು ಸರ್ವೇ ನಂ-45/4 ರ 2022-23 ರ ಪಹಣಿ ಪತ್ರಿಕೆ ಇದ್ದು, ಅದು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಿಪಿ-45 ಜಮೀನು

ಸರ್ವೇ ನಂ-29/3 ರ 2022-23 ರ ಪಹಣಿ ಪತ್ರಿಕೆ ಇದ್ದು, ಅದು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಿಪಿ-46 ಜಮೀನು ಸರ್ವೇ ನಂ-2/2 ರ 2022-23 ರ ಪಹಣಿ ಪತ್ರಿಕೆ ಇದ್ದು, ಅದು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಿಪಿ-47 ಜಮೀನು ಸರ್ವೇ ನಂ-120/1 ರ 2019-20 ರ ಪಹಣಿ ಪತ್ರಿಕೆ ಇದ್ದು, ಅದು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಿಪಿ-48 ಜಮೀನು ಸರ್ವೇ ನಂ-149/3 ರ 2022-23 ರ ಪಹಣಿ ಪತ್ರಿಕೆ ಇದ್ದು, ಅದು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಿಪಿ-49 ಜಮೀನು ಸರ್ವೇ ನಂ-44/1 ರ 2022-23 ರ ಪಹಣಿ ಪತ್ರಿಕೆ ಇದ್ದು, ಅದು 1,3 ಮತ್ತು 4 ನೇ ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ. ನಿಪಿ-50 ಮತ್ತು 51 ಮುಟೇಶನ್ ರಿಜಿಸ್ಟರ್ ಪ್ರತಿಗಳು ಇರುತ್ತವೆ, ನಿಪಿ-52 ಜಮೀನು ಸರ್ವೇ ನಂ-39 ರ 1996-97 ರ ಪಹಣಿ ಪತ್ರಿಕೆ ಇದ್ದು, ಅದು ತಿಮ್ಮೇಶಪ್ಪ ತಂದೆ ಹನುಮಂತಪ್ಪನ ಹೆಸರಿನಲ್ಲಿ ಇರುತ್ತದೆ. ನಿಪಿ-53 ಮತ್ತು 54 ದಾವಾ ಆಸ್ತಿಯ 2022-23 ನೇ ಸಾಲಿನ ಪಹಣಿ ಪತ್ರಿಕೆ ಇದ್ದು, ಅದು 1 ರಿಂದ 4 ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಇರುತ್ತವೆ. ನಿಪಿ-55 ಮತ್ತು 57 ಜಮೀನು ಸರ್ವೇ ನಂ-39/1 ರ ಹಿಸ್ಸಾ ಮೋಜಿಣಿಯಂತೆ ಹಕ್ಕು ದಾಖಲಾತಿಯ ದೃಢೀಕೃತ ನಕಲು ಹಾಗೂ ನಿಪಿ-56 ಆಕಾರ್ ಬಂದ್ ನ ದೃಢೀಕೃತ ನಕಲು ಇರುತ್ತದೆ.

**29**. ಅಸಲು ದಾವಾ ಸಂಖ್ಯೆ-16/2020 ರಲ್ಲಿನ 5 ನೇ ಪ್ರತಿವಾದಿಯ ಪರ ನಿಶಾನೆ ಎಂದು ಗುರುತಿಸಿಕೊಂಡಂತಹ ದಾಖಲೆಯನ್ನು ಅವಲೋಕಿಸಲಾಗಿ, ನಿಡಿ-1 ದಾವಾ ಆಸ್ತಿಯ 2018-19 ನೇ ಸಾಲಿನ ಪಹಣಿ ಪತ್ರಿಕೆ ಇದ್ದು, ಅದು 1 ರಿಂದ 4 ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಇರುತ್ತದೆ.

**30**. ಅಸಲು ದಾವಾ ಸಂಖ್ಯೆ-29/2019 ರಲ್ಲಿನ ವಾದಿಯ ಪರ ನಿಶಾನೆ ಎಂದು ಗುರುತಿಸಿಕೊಂಡಂತಹ ದಾಖಲೆಗಳನ್ನು ಅವಲೋಕಿಸಲಾಗಿ, ನಿಪಿ-1 ಸಾಮಾನ್ಯ ಮುಕ್ತಿಯಾರನಾಮೆ, ನಿಪಿ-2 ದಿನಾಂಕಃ 04-04-2019 ರ ಮೂಲ ನೊಂದಾಯಿತ ಕ್ರಯದ ಕರಾರು ಪತ್ರ, ನಿಪಿ-3 ದಾವಾ ಆಸ್ತಿಯ 2018-19 ನೇ ಸಾಲಿನ ಪಹಣಿ ಪತ್ರಿಕೆ ಇದ್ದು, ಅದು 1 ರಿಂದ 4 ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಇರುತ್ತದೆ. ನಿಪಿ-4 ವಾದಿ ತನ್ನ ವಕೀಲರ ಮೂಲಕ 1 ರಿಂದ 4 ನೇ ಪ್ರತಿವಾದಿಗಳಿಗೆ ಕೊಟ್ಟ ಕಾನೂನು ರಿತ್ಯ ನೋಟೀಸಿನ ಕಛೇರಿ ಪ್ರತಿ ಮತ್ತು ನಿಪಿ-5 ರಿಂದ 8 ಅಂಚೆ ರಶೀದಿಗಳು ಇರುತ್ತವೆ.

**31**. ಮೂಲ ದಾವೆ ನಂ-29/2019 ರಲ್ಲಿನ ನಿಪಿ-1 ರ ಪ್ರಕಾರ ಸದರಿ ದಾವೆಯ ವಾದಿಯಾದ ಶ್ರೀಮತಿ ಕೆ.ಎಸ್. ಆಶಾ ಇವಳು ಸದರಿ ದಾವೆಯನ್ನು ತನ್ನ ಪರ ನಡೆಸಲು ತನ್ನ ಗಂಡನಾದ ಕೆ.ಸಿ.ಗುರುಸಿದ್ದಪ್ಪ ಇವನಿಗೆ ಸಾಮಾನ್ಯ ಮುಕ್ತಿಯಾರನಾಮೆಯನ್ನು ಬರೆದುಕೊಟ್ಟಿರುವುದು ಕಂಡುಬರುತ್ತದೆ. ಆದರೆ ನಿಪಿ-1 ರಲ್ಲಿ ದಿನಾಂಕಃ 04-04-2019 ರ ಕ್ರಯದ ಕರಾರಿನ ವ್ಯವಹಾರದ ಬಗ್ಗೆ ತನ್ನ ಗಂಡನಿಗೆ ಸಂಪೂರ್ಣ ಮಾಹಿತಿ ಇದೆ ಎಂದು ಹೇಳಿಲ್ಲ. ಆದರೆ, ಡಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆಯಲ್ಲಿ ಆಶಾ ಇವಳು ಉಪಸ್ಥಿತಿ ಇರಲಿಲ್ಲ ಎಂದರೆ ಸಾಕ್ಷಿ ಅವರ ಯಜಮಾನರು ಇದ್ದರು ಎಂದು ಸಾಕ್ಷಿ ನುಡಿದಿರುವುದರಿಂದ, ಹಾಗೂ ಮೂಲ ದಾವೆ ನಂ-29/2019 ರಲ್ಲಿ ವಾದಿಯ ಪರ ಸಾಕ್ಷಿ ನುಡಿದ ಅವಳ ಗಂಡನಾದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ ಆಶಾ ಅವರು ವ್ಯವಹಾರ ಮಾಡುವಾಗ 10,80,000/- ಆದರೆ ಒಪ್ಪುತ್ತೇನೆ, ಅದರ ಮೇಲೆ ಬೇಡವೆಂದು ಹೇಳಿರುತ್ತಾಳೆ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ಚೌಕಾಸಿಯನ್ನು ಮಾಡಿಲ್ಲ. ಚೌಕಾಸಿಯನ್ನು ಮಾಡಿದಾಗ ಅವರ ಮಕ್ಕಳು ಇದ್ದರು, ಗ್ರಾಮದವರು ಬಿಟ್ಟು ತಾನು, ತನ್ನ ಹೆಂಡತಿ, ಮಂಜುನಾಥ, ಭೈರಪ್ಪ, ಸಿದ್ದೇಶ

ಇದ್ದರು ಎಂದು ಸಾಕ್ಷಿ ನುಡಿದಿರುವುದರಿಂದ, ಅದೇ ರೀತಿ ಪಿ.ಡಬ್ಲೂ-2 ತನ್ನ ಪಾಟಿಸವಾಲಿನಲ್ಲಿ ಪತ್ರ ಬರಹಗಾರರಿಗೆ ಗುರುಸಿದ್ದಪ್ಪ ಹೇಳಿರುತ್ತಾರೆ. ಆ ಸಮಯದಲ್ಲಿ ಅವನ ಹೆಂಡತಿ ಆಶಾ ಇದ್ದಳು ಎಂದು ಸಾಕ್ಷಿ ನುಡಿದಿರುವುದರಿಂದ, ಅದೇ ರೀತಿ ಪಿ.ಡಬ್ಲೂ-3 ತನ್ನ ಪಾಟಿಸವಾಲಿನಲ್ಲಿ ನಿಪಿ-2 ನ್ನು ಮಾಡಿಸುವಾಗ ತಾನು ಇದ್ದು, ಆ ಸಮಯದಲ್ಲಿ ಮಂಜುನಾಥ, ಗುರುಸಿದ್ದಪ್ಪ, ಆಶಾ ಮತ್ತು ಅವರು ನಾಲ್ಕು ಜನರು ಇದ್ದರು ಎಂದು ಸಾಕ್ಷಿ ನುಡಿದಿರುವುದರಿಂದ, ನಿಪಿ-2 ರಂತೆ ದಿನಾಂಕಃ 04-04-2019 ರಂದು ಆದಂತಹ ಕ್ರಯದ ಕರಾರಿನ ಬಗ್ಗೆ ಮಾಹಿತಿಯು ವಾದಿಯ ಗಂಡನಾದ ಕೆ.ಸಿ ಗುರುಸಿದ್ದಪ್ಪನಿಗೆ ಇರುತ್ತದೆ. ಅಲ್ಲದೆ, ವಾದಿಯ ಗಂಡನು ದಾವಾ ಆಸ್ತಿ ಕ್ರಯದ ವ್ಯವಹಾರದ ಮಾತುಕತೆಯ ಸಮಯದಲ್ಲಿ ಹಾಗೂ ನಿಪಿ-2 ರಂತೆ ಕ್ರಯದ ಕರಾರುಪತ್ರವನ್ನು ನೊಂದಣಿ ಮಾಡಿಸುವಂತಹ ಸಮಯದಲ್ಲಿ ಹಾಜರಿದ್ದು, ಅವನಿಗೆ ಸದರಿ ಕ್ರಯದ ಕರಾರಿನ ವ್ಯವಹಾರದ ಸಂಪೂರ್ಣ ಮಾಹಿತಿ ಇರುತ್ತದೆ ಎಂದು ಪಿ.ಡಬ್ಲೂ-1 ರಿಂದ 3 ಹಾಗೂ ಡಿ.ಡಬ್ಲೂ-1 ರವರ ಸಾಕ್ಷಿಯ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ, ಸಾಮಾನ್ಯವಾಗಿ ಯಾವುದೇ ಒಂದು ಕುಟುಂಬದಲ್ಲಿ ಯಾವುದಾದರೂ ಒಂದು ಸ್ಥಿರ ಆಸ್ತಿಯನ್ನು ಖರೀದಿಸುವ ಉದ್ದೇಶವನ್ನು ಹೊಂದಿದಾಗ, ಆ ಕುಟುಂಬದಲ್ಲಿರುವ ಎಲ್ಲ ಸದಸ್ಯರು ಸಾಮಾನ್ಯವಾಗಿ ಚರ್ಚಿಸಿ, ಅಂತಹ ವ್ಯವಹಾರಕ್ಕೆ ಮುಂದುವರೆಯುತ್ತಾರೆ. ಅಲ್ಲದೆ, ಮೂಲ ದಾವೆ ನಂ-29/2019 ರಲ್ಲಿನ ವಾದಿಯ ಪರ ಜಿ.ಪಿ.ಎ ಮೂಲಕ ಸಾಕ್ಷಿ ನುಡಿದ ಪಿ.ಡಬ್ಲೂ-1 ವಾದಿಯ ಗಂಡನಿದ್ದು, ಅವನಿಗೆ ಸಹಜವಾಗಿಯೇ ಅವನ ಹೆಂಡತಿ ಸ್ಥಿರ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳಲು ಮಾಡಿದಂತಹ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದೇ ಇರುತ್ತದೆ. ಆದ್ದರಿಂದ, ಸದರಿ ದಾವೆಯ ವಾದಿಯ ಪರ ವಕೀಲರು ತಮ್ಮ ವಾದಮಂಡನೆಯಲ್ಲಿ ಹೇಳಿದಂತೆ ಅರ್ಧನಾರೇಶ್ವರಿ ಎಂಬ ತತ್ವವು ಅನ್ವಯವಾಗುತ್ತಿದ್ದು, ಅದರಂತೆ ವಾದಿಯ ಗಂಡನಾದ ಪಿ.ಡಬ್ಲೂ-1 ರವರಿಗೆ

ದಿನಾಂಕಃ04-04-2019 ರ ಕ್ರಯದ ಕರಾರಿನ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಅಲ್ಲದೆ, ಮೂಲ ದಾವೆ ನಂ-16/2020 ರಲ್ಲಿನ ವಾದಿಗಳ ಪರ ವಕೀಲರು ಆಧರಿಸಿರುವ ಮೇಲೆ ಹೇಳಲಾದ ಮಾನ್ಯ ಸರ್ವೋಚ್ಚನ್ಯಾಯಾಲಯದ ನಿರ್ಧರಿತ ಪ್ರಕರಣವಾದ Civil Appeal No.7840/2023 (Rajesh Kumar V.s Anand Kumar and others) ರಲ್ಲಿ ವಾದಿಯ ಪರವಾಗಿ 3 ನೇ ವ್ಯಕ್ತಿ ಜಿ.ಪಿ.ಎ ಮೂಲಕ ಸಾಕ್ಷಿ ಹೇಳಿದ್ದ, ಆದರೆ ಮೂಲ ದಾವೆ ನಂ-29/2019 ರಲ್ಲಿನ ವಾದಿಯ ಪರವಾಗಿ ಜಿ.ಪಿ.ಎ ಮೂಲಕ ಸಾಕ್ಷಿ ನುಡಿದ ಪಿ.ಡಬ್ಲೂ-1 ವಾದಿಯ ಗಂಡ ಇರುತ್ತಾನೆ. ಆದ್ದರಿಂದ, ಮೂಲ ದಾವೆ ನಂ-16/2020 ರಲ್ಲಿನ ವಾದಿಗಳ ಪರ ವಕೀಲರು ಆಧರಿಸಿರುವ ಮೇಲೆ ಹೇಳಲಾದ ಮಾನ್ಯ ಸರ್ವೋಚ್ಚನ್ಯಾಯಾಲಯದ ನಿರ್ಧರಿತ ಪ್ರಕರಣದ ವಸ್ತು ಸ್ಥಿತಿ ಮತ್ತು ಸಂದರ್ಭ ಬೇರೆ ಇದ್ದು, ಮೂಲ ದಾವೆ ನಂ-29/2019 ರಲ್ಲಿನ ವಸ್ತುಸ್ಥಿತಿ ಮತ್ತು ಸಂದರ್ಭ ಬೇರೆ ಇರುವ ಕಾರಣ, ಸದರಿ ನಿರ್ಧರಿತ ತೀರ್ಪು ಮೂಲ ದಾವೆ ನಂ-16/2020 ರಲ್ಲಿನ ವಾದಿಗಳಿಗೆ ಸಹಾಯಕವಾಗಿರುವುದಿಲ್ಲ. ಆದ್ದರಿಂದ, ಮೂಲ ದಾವೆ ನಂ-29/2019 ರಲ್ಲಿನ ವಾದಿಯ ಗಂಡನು ದಿನಾಂಕಃ 04-04-2019 ರ ಕ್ರಯದ ಕರಾರಿನ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದಿ, ನಿಪಿ-1 ರಂತೆ ತನ್ನ ಹೆಂಡತಿಯಿಂದ ಸಾಮಾನ್ಯ ಮುಕ್ತಿಯಾರನಾಮೆಯನ್ನು ಪಡೆದು, ಪಿ.ಡಬ್ಲೂ-1 ಎಂದು ಸಾಕ್ಷಿ ನುಡಿದಿರುತ್ತಾನೆ.

**32**. ಮೂಲ ದಾವೆ ನಂ29/2019 ರಲ್ಲಿನ ನಿಪಿ-2 ಹಾಗೂ ಮೂಲ ದಾವೆ ನಂ-16/2020 ರಲ್ಲಿನ ನಿಪಿ-8 ನೊಂದಾಯಿತ ಕ್ರಯದ ಕರಾರು ಪತ್ರ ಇದ್ದು, ಅದರಂತೆ 1 ರಿಂದ 4 ನೇ ಪ್ರತಿವಾದಿಗಳು ದಿನಾಂಕಃ04-04-2019 ರಂದು ದಾವಾ ತಪಶೀಲಿನ ಆಸ್ತಿಯನ್ನು ಒಟ್ಟು 10,80,000/- ರೂಗಳಿಗೆ ವಾದಿಗೆ ಮಾರಾಟ ಮಾಡುವುದಾಗಿ ಒಪ್ಪಿ, ವಾದಿಯಿಂದ ಮುಂಗಡವಾಗಿ 4,60,000/- ರೂಗಳನ್ನು 1 ರಿಂದ 4 ನೇ

ಪ್ರತಿವಾದಿಗಳು ಪಡೆದುಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ, ಆ ಕುರಿತು ಪಿ.ಡಬ್ಲೂ-1 ರಿಂದ 3 ತಮ್ಮ ಮುಖ್ಯ ವಿಚಾರಣೆಯಲ್ಲಿ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಆದರೆ 3 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ, 1,2 ಮತ್ತು 4 ನೇ ಪ್ರತಿವಾದಿಗಳು ತನ್ನ ಸಹೋದರರು ಇದ್ದು, ಅವರು ವಾದಿಯ ಗಂಡನೊಂದಿಗೆ ಹಣಕಾಸಿನ ವ್ಯವಹಾರವನ್ನು ಹೊಂದಿದ್ದರಿಂದ, ನೊಂದಾಯಿತ ಕ್ರಯದ ಕರಾರು ಪತ್ರಕ್ಕೆ 3 ನೇ ಪ್ರತಿವಾದಿಯ ಸಹಿಯನ್ನು ಪಡೆದು ಭದ್ರತೆಯ ಸಲುವಾಗಿ ವಾದಿಯ ಪರವಾಗಿ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟು ಅದನ್ನು ಬೇಗನೇ ರದ್ದುಪಡಿಸುವುದಾಗಿ ಹೇಳಿರುತ್ತಾರೆಂದು ಆರೋಪಿಸಿರುತ್ತಾನೆ. ಆದರೆ, ಆ ಕುರಿತಂತೆ 3 ನೇ ಪ್ರತಿವಾದಿಯ ಪರವಾಗಿ ಯಾವುದೇ ಸಾಕ್ಷಿ ಇಲ್ಲ. ಅಲ್ಲದೆ, 3 ನೇ ಪ್ರತಿವಾದಿಯ ಪರ ವಕೀಲರು ಪಿ.ಡಬ್ಲೂ-1 ರಿಂದ 3 ರವರನ್ನು ಪಾಟಿಸವಾಲು ಮಾಡಿ, 1, 2 ಮತ್ತು 4 ನೇ ಪ್ರತಿವಾದಿಗಳು ವಾದಿಯ ಗಂಡನೊಂದಿಗೆ ಹೊಂದಿದ ಹಣಕಾಸಿನ ವ್ಯವಹಾರದ ಭದ್ರತೆಯ ಸಲುವಾಗಿ, 3 ನೇ ಪ್ರತಿವಾದಿಯ ಸಹಿಯನ್ನು ಪಡೆದು ಕ್ರಯದ ಕರಾರುಪತ್ರವನ್ನು ನೊಂದಣಿ ಮಾಡಿಸಿಕೊಟ್ಟಿರುತ್ತಾರೆ ಎಂದು ಯಾವುದೇ ಸಾಕ್ಷಿಯನ್ನು ಹೇಳಿಸಿಕೊಂಡಿಲ್ಲ. ಅಲ್ಲದೆ, 3 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಗಳಲ್ಲಿ ದಿನಾಂಕಃ 04-04-2019 ರ ನೊಂದಾಯಿತ ಕ್ರಯದ ಕರಾರುಪತ್ರವಾದ ನಿಪಿ-2 ಕ್ಕೆ ತನ್ನ ಸಹೋದರರು ತನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆಂದು ಹೇಳಿರುವುದರಿಂದ, ನಿಪಿ-2 ರಲ್ಲಿರುವ ನಿಪಿ-2(ಸಿ)ಸಹಿ 3 ನೇ ಪ್ರತಿವಾದಿಯದು ಎನ್ನುವುದು ನಿರ್ವಿವಾದವಾದ ಸಂಗತಿ.ಅಲ್ಲದೆ, ಮೂಲ ದಾವೆ ನಂ-29/2019 ರಲ್ಲಿನ 5 ರಿಂದ 9 ನೇ ಪ್ರತಿವಾದಿಗಳ ಪರ ವಕೀಲರು ಪಿ.ಡಬ್ಲೂ-1 ರಿಂದ 3 ರವರನ್ನು ಪಾಟಿಸವಾಲು ಮಾಡಿದಾಗಲೂ ಸಹ, ನಿಪಿ-2(ಸಿ) 3 ನೇ ಪ್ರತಿವಾದಿಯ ಸಹಿ ಎನ್ನುವುದು ಸುಳ್ಳು ಎಂದು ಅಲ್ಲಗಳೆದಿಲ್ಲ. ಅಲ್ಲದೆ, ಮೂಲ ದಾವೆ ನಂ-16/2020 ರಲ್ಲಿ ವಾದಿಯರ ಪರ ಸಾಕ್ಷಿನುಡಿದ ಪಿ.ಡಬ್ಲೂ-1 ತನ್ನ

ಪಾಟಿಸವಾಲಿನಲ್ಲಿ ನಿಪಿ-8 ರಲ್ಲಿರುವ ಸಹಿಗಳು ಮತ್ತು ಫೋಟೋಗಳು ಯಾರವು ಎನ್ನುವುದು ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿಯ ವಕಾಲತ್ತಿನಲ್ಲಿರುವ ಸಹಿ ಯಾರದು ಎಂದು ಗೊತ್ತಿರುವುದಿಲ್ಲ. ತಮ್ಮ ತಂದೆಯ ಸಹಿಯನ್ನು ನೋಡಿರುವುದಿಲ್ಲ. 5 ನೇ ಪ್ರತಿವಾದಿಗೆ ಬರೆದುಕೊಟ್ಟ ಕರಾರುಪತ್ರದಲ್ಲಿ ತಮ್ಮ ತಂದೆ ಸಹಿ ಮಾಡಿಲ್ಲ ಎಂದು ಸಾಕ್ಷಿ ನುಡಿದಿರುವುದರಿಂದ, ಪಿ.ಡಬ್ಲೂ-1 ರವರಿಗೆ ತಮ್ಮ ತಂದೆಯ ಸಹಿ ಯಾವುದು ಮತ್ತು ತಮ್ಮ ತಂದೆಯ ಸಹಿಯನ್ನು ನೋಡಿಲ್ಲ ಎಂದು ಸದರಿ ಸಾಕ್ಷಿಯ ಮೂಲಕ ಕಂಡುಬರುತ್ತಿರುವುದರಿಂದ, 5 ನೇ ಪ್ರತಿವಾದಿಯ ಪರ ಬರೆದುಕೊಟ್ಟ ಕರಾರುಪತ್ರದಲ್ಲಿ 3 ನೇಪ್ರತಿವಾದಿಯ ಸಹಿ ಇಲ್ಲ ಎಂದು ಪಿ.ಡಬ್ಲೂ-1 ಹೇಳಲು ಸಾಧ್ಯವಿಲ್ಲ. ಏಕೆಂದರೆ ತನ್ನ ತಂದೆಯ ಸಹಿ ನೋಡಿಲ್ಲವೆಂದು ಸಾಕ್ಷಿ ನುಡಿದ ಕಾರಣ, ನಿಪಿ-2 ರಲ್ಲಿರುವ 2(ಸಿ) 3 ನೇ ಪ್ರತಿವಾದಿಯ ಸಹಿ ಹೌದು ಅಥವಾ ಅಲ್ಲವೆಂದು ಪಿ.ಡಬ್ಲೂ-1 ರವರಿಗೆ ಗೊತ್ತಿರುವುದಿಲ್ಲ. ಆದ್ದರಿಂದ, ನಿಪಿ-2(ಸಿ)ನೇ 3 ನೇ ಪ್ರತಿವಾದಿಯ ಸಹಿ ಇರುತ್ತದೆ.

**33**. ಮೂಲ ದಾವೆ ನಂ-16/2020 ರಲ್ಲಿ ವಾದಿಗಳು ತಮ್ಮ ವಾದಪತ್ರದ ಪ್ರಾರ್ಥನೆಯ ಖಂಡಿಕೆ-(ಸಿ) ರಲ್ಲಿ 1 ರಿಂದ 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿ ಹೆಸರಿಗೆ ದಿನಾಂಕಃ 04-04-2019 ರಂದು ರಿಜಿಸ್ಟರ್ ಪತ್ರ ಸಂಖ್ಯೆ-ಬಿಕೆ-37-2019-20 ರ ಕ್ರಯದ ಒಪ್ಪಂದದ ಕರಾರುಪತ್ರವು ಕಾನೂನುಬಾಹಿರವಾಗಿರುತ್ತದೆ ಎಂದು ಘೋಷಿಸಬೇಕೆಂದು ಹಾಗೂ ಪ್ರಾರ್ಥನೆಯ ಖಂಡಿಕೆ -(ಇ)ರಲ್ಲಿ ಕ್ರಯದ ಕರಾರಿನಲ್ಲಿ 5 ನೇ ಪ್ರತಿವಾದಿ ನೀಡಿದ ಮುಂಗಡ ಹಣ ಸಮೇತ ನ್ಯಾಯಾಲಯದಲ್ಲಿ ಠೇವಣಿ ಮಾಡಲು ನಿರ್ದೇಶಿಸಿ ಆದೇಶಿಸಬೇಕು ಎಂಬ ಪರಿಹಾರಗಳನ್ನು ಕೋರಿರುವುದರಿಂದ, ಸದರಿ ಪರಿಹಾರಗಳ ಪ್ರಕಾರ ನಿಪಿ-2 ರಂತೆ ನೊಂದಾಯಿತ ಕ್ರಯದ ಕರಾರುಪತ್ರವನ್ನು ದಿನಾಂಕಃ 04-04-2019 ರಂದು 1 ರಿಂದ 4 ನೇ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದಂತೆ 5 ನೇ ಪ್ರತಿವಾದಿಯಾದ ಕೆ.ಎಸ್. ಆಶಾ ಇವಳ ಪರ ಬರೆದುಕೊಟ್ಟಿರುವುದು ಸ್ಪಷ್ಟವಾಗಿ

ಕಂಡುಬರುತ್ತದೆ. ಅಲ್ಲದೆ, ಮೂಲ ದಾವೆ ನಂ-29/2019 ರಲ್ಲಿನನಿಪಿ-2 ನೊಂದಾಯಿತ ಕ್ರಯದ ಕರಾರುಪತ್ರ ಇದ್ದು, ಅದನ್ನು 1 ರಿಂದ 4 ನೇ ಪ್ರತಿವಾದಿಗಳು ವಾದಿಯ ಪರವಾಗಿ ದಿನಾಂಕಃ 04-04-2019 ರಂದು ಬರೆದುಕೊಟ್ಟು, ದಾವಾ ಆಸ್ತಿಯನ್ನು 10,80,000/- ರೂಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ, ಮುಂಗಡವಾಗಿ ಸಾಕ್ಷಿದಾರರ ಸಮಕ್ಷಮ 4,60,000/- ರೂಗಳನ್ನು ಪಡೆದುಕೊಂಡಿರುತ್ತಾರೆ ಎನ್ನುವುದನ್ನು ಮೂಲ ದಾವೆ ನಂ-29/2019 ರಲ್ಲಿನ ವಾದಿ ಸಾಭೀತುಪಡಿಸಿರುತ್ತಾಳೆ.

**34**. ಮೂಲ ದಾವೆ ನಂ-29/2019 ರಲ್ಲಿನ ನಿಪಿ-2 ನೊಂದಾಯಿತ ಕ್ರಯದ ಕರಾರು ಪತ್ರದ ಪ್ರಕಾರ, 1 ರಿಂದ 4 ನೇ ಪ್ರತಿವಾದಿಗಳು ದಿನಾಂಕಃ04-04-2019 ರಂದು ದಾವಾ ತಪಶೀಲಿನ ಆಸ್ತಿಯನ್ನು ಒಟ್ಟು 10,80,000/- ರೂಗಳಿಗೆ ವಾದಿಗೆ ಮಾರಾಟ ಮಾಡುವುದಾಗಿ ಒಪ್ಪಿ, ವಾದಿಯಿಂದ ಮುಂಗಡವಾಗಿ 4,60,000/- ರೂಗಳನ್ನು 1 ರಿಂದ 4 ನೇ ಪ್ರತಿವಾದಿಗಳು ಪಡೆದುಕೊಂಡು, ಕ್ರಯದ ಬಾಕಿ ಹಣ 6,20,000/- ರೂಗಳನ್ನು ಸದರಿ ಕ್ರಯದ ಕರಾರಿನ ದಿನಾಂಕದಿಂದ 3 ತಿಂಗಳ ಒಳಗಾಗಿ ವಾದಿ 1 ರಿಂದ 4 ನೇ ಪ್ರತಿವಾದಿಗಳಿಗೆ ಪಾವತಿಸತಕ್ಕದ್ದಾಗಿರುತ್ತದೆ ಎಂದು ನಮೂದು ಇರುವ ಕಾರಣ, ಕ್ರಯದ ಬಾಕಿ ಮೊತ್ತವನ್ನು 3 ತಿಂಗಳ ಒಳಗಾಗಿ ಪಾವತಿಸಬೇಕಾಗಿರುವುದು ವಾದಿಯ ಕರ್ತವ್ಯವಾಗಿರುತ್ತದೆ. ಆದರೆ, ವಾದಿ ನಿಪಿ-4 ರಂತೆ ಕೊಟ್ಟ ನೋಟೀಸಿನಲ್ಲಿ ದಿನಾಂಕಃ03-07-2019 ರಂದು ವಾದಿ 1 ರಿಂದ 4 ನೇ ಪ್ರತಿವಾದಿಗಳನ್ನು ಕಂಡು ಬಾಕಿ ಇರುವ 6,20,000/- ಹಣವನ್ನು ತೆಗೆದುಕೊಂಡು ಅವರ ಮನೆಯ ಬಾಗಿಲಿಗೆ ಹೋದಾಗ, 3 ನೇ ಪ್ರತಿವಾದಿಯ ಮಾತನ್ನು ಕೇಳಿ ಈ ದಿನ-ನಾಳೆ ಎಂದು ಹಣ ತೆಗೆದುಕೊಳ್ಳದೇ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡದೇ ದಿನ ತಳ್ಳುತ್ತಾ ಬಂದಿರುತ್ತಾರೆ ಎನ್ನುವುದಾಗಿರುವುದರಿಂದ, ನಿಪಿ-2 ರಂತೆ ಕ್ರಯದ ಕರಾರು ಪತ್ರ ಆದ 3 ತಿಂಗಳ ಒಳಗೆ ಅಂದರೆ ದಿನಾಂಕಃ 04-07-2019 ರ ಒಳಗೆ ಸದರಿ ಬಾಕಿ ಹಣ

ವಾದಿ 1 ರಿಂದ 4 ನೇ ಪ್ರತಿವಾದಿಗಳಿಗೆ ಪಾವತಿಸಬೇಕಾಗಿದ್ದು, ಆದರೆ ದಿನಾಂಕಃ 03-07-2019 ರಂದು ಅಂದರೆ 3 ತಿಂಗಳು ಪೂರ್ಣಗೊಳ್ಳಲು 1 ದಿನ ಬಾಕಿ ಇದ್ದಾಗ ಮಾತ್ರ, ವಾದಿ ಸದರಿ ಹಣವನ್ನು ಕೊಡಲು ತಯಾರಿ ಇದ್ದಳು ಎಂದು ನಿಪಿ-4 ರ ಪ್ರಕಾರ ಕಂಡುಬರುತ್ತದೆ. ಅಲ್ಲದೆ, ಎರಡೂ ದಾವೆಗಳಲ್ಲಿನ 2 ನೇ ಪ್ರತಿವಾದಿಯಾದ ಶರಣಪ್ಪನು ಮೂಲ ದಾವೆ ನಂ-16/2020 ರಲ್ಲಿ ಡಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ತನ್ನ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ ಕ್ರಯದ ಕರಾರುಪತ್ರದಲ್ಲಿ ತಿಳಿಸಿರುವ ಪ್ರಕಾರ ತಾವುಗಳು ನಡೆದುಕೊಂಡಿಲ್ಲ, ತಮ್ಮ ಸಹೋದರ ಅಂಜಿನಪ್ಪನು ತಮ್ಮೊಂದಿಗೆ ಬಂದು ನೊಂದಾಯಿತ ಕ್ರಯಪತ್ರವನ್ನು ಮಾಡಿಕೊಡಲು ಸಹಕರಿಸಿದೇ ಇದ್ದುದ್ದರಿಂದ, ಅದು ಸಾಧ್ಯವಾಗಿರುವುದಿಲ್ಲವೆಂದು ಸಾಕ್ಷಿ ನುಡಿದಿರುತ್ತಾನೆ. ಆದರೆ, ಮೂಲ ದಾವೆ ನಂ-16/2020 ರಲ್ಲಿನ ವಾದಿಗಳ ಪರ ವಕೀಲರ ಪಾಟಿಸವಾಲಿನಲ್ಲಿ, ಕ್ರಯದ ಕರಾರುಪತ್ರ ನೊಂದಣಿಯಾದ ನಂತರ ಅವರು ಹಣ ಕೊಡಲು ಬಂದಿದ್ದರಾ ಎಂದರೆ ಸಾಕ್ಷಿ ಅವರು ಹಣ ಕೊಡಲು ಬಂದಿಲ್ಲ, ನಾವು ನೊಂದಣಿ ಮಾಡಿಸಿಕೊಟ್ಟಿಲ್ಲ ಎಂದು ಸಾಕ್ಷಿ ನುಡಿದಿದ್ದು, ಅದೇ ರೀತಿ ತನ್ನ ಪಾಟಿಸವಾಲಿನಲ್ಲಿ ದಿನಾಂಕಃ 04-04-2019 ರಂದು ಆದ ಕ್ರಯದ ಕರಾರು ಪತ್ರದ ನಂತರ ಆಶಾ ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸಿ, ತಮಗೆ ನೋಟಿಸನ್ನು ಕಳುಹಿಸಿರುತ್ತಾಳೆ ಎನ್ನುವುದು ನಿಜ. ಅದರ ಮೊದಲು ಆಶಾ ತಮ್ಮನ್ನು ಭೇಟಿ ಮಾಡಿಲ್ಲ, ಗುರುಬಸಪ್ಪ ಭೇಟಿ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದಿರುವುದರಿಂದ, ಸದರಿ ಪಾಟಿಸವಾಲಿನ ಸಾಕ್ಷಿಯ ಪ್ರಕಾರ ಮೂಲ ದಾವೆ ನಂ-29/2019 ರಲ್ಲಿನ ವಾದಪತ್ರದಲ್ಲಿ ಆರೋಪಿಸಿದಂತೆ ದಿನಾಂಕಃ 03-07-2019 ರಂದು ಸದರಿ ದಾವೆಯ ವಾದಿಯಾದ ಕೆ.ಎಸ್ ಆಶಾ ಇವಳು ಕ್ರಯದ ಉಳಿದ ಮೊತ್ತ 6,20,000/- ರೂಗಳನ್ನು ತೆಗೆದುಕೊಂಡು 1 ರಿಂದ 4 ನೇ ಪ್ರತಿವಾದಿಗಳನ್ನು ಭೇಟಿ ಮಾಡಿ, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ಕೇಳಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ,

ಮೂಲ ದಾವೆ ನಂ-29/2019 ರಲ್ಲಿನ ವಾದಿಯ ಪರ ವಕೀಲರು ಡಿ.ಡಬ್ಲೂ-1 ರವರನ್ನು ಪಾಟಿಸವಾಲು ಮಾಡದೇ ಏನು ಇಲ್ಲವೆಂದು ಹೇಳಿರುತ್ತಾರೆ ವಿನಃ, ಸದರಿ ಡಿ.ಡಬ್ಲೂ-1 ರವರನ್ನು ಪಾಟಿಸವಾಲು ಮಾಡುವುದರ ಮೂಲಕ, ಸದರಿ ದಾವೆಯ ವಾದಪತ್ರದಲ್ಲಿ ಆರೋಪಿಸಿದಂತೆ ದಿನಾಂಕಃ03-07-2019 ರಂದು ವಾದಿಯು ಉಳಿದ ಕ್ರಯದ ಮೊತ್ತವನ್ನು ತೆಗೆದುಕೊಂಡು 1 ರಿಂದ 4 ನೇ ಪ್ರತಿವಾದಿಗಳನ್ನು ಭೇಟಿ ಮಾಡಿ, ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ಕೇಳಿರುತ್ತಾಳೆ ಎಂದು ಯಾವುದೇ ಸಾಕ್ಷಿಯನ್ನು ಹೇಳಿಸಿಕೊಂಡಿಲ್ಲ. ಆದ್ದರಿಂದ, ಮೂಲ ದಾವೆ ನಂ-29/2019 ರಲ್ಲಿನ ನಿಪಿ-2 ರಲ್ಲಿರುವ ಷರತ್ತಿನಂತೆ ವಾದಿಯು ಸದರಿ ಕ್ರಯದ ಕರಾರಿನ ದಿನಾಂಕದಿಂದ 3 ತಿಂಗಳ ಒಳಗೆ ಉಳಿದ ಕ್ರಯದ ಮೊತ್ತ 6,20,000/- ರೂಗಳನ್ನು 1 ರಿಂದ 4 ನೇ ಪ್ರತಿವಾದಿಗಳಿಗೆ ಪಾವತಿಸಿಲ್ಲ ಮತ್ತು ಆ ರೀತಿ ಪಾವತಿಸಲು 3 ತಿಂಗಳ ಒಳಗೆ ಪ್ರಯತ್ನ ಮಾಡಿಲ್ಲವೆಂದು ಡಿ.ಡಬ್ಲೂ-1 ರವರ ಸಾಕ್ಷಿಯ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ, ವಾದಿಯ ಗಂಡನಾದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ ವಾದಪತ್ರ, ಮುಖ್ಯ ವಿಚಾರಣೆ ಹಾಗೂ ನಿಪಿ-2 ರಲ್ಲಿ ಹೇಳಿದಂತೆ ಕ್ರಯದ ಮೊತ್ತ 10,80,000/- ರೂಗಳಲ್ಲಿ ಮುಂಗಡವಾಗಿ 4,60,000/- ರೂಗಳನ್ನು ವಾದಿ ಕೊಡಲು ಅವಳ ಬಳಿ ಹಣ ಎಲ್ಲಿ ಇತ್ತು ಎನ್ನುವುದಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅವಳ ಸ್ವಂತ ಹಣ ಇಲ್ಲ, ಕುಟುಂಬದ ಆದಾಯವೆಂದು ಸಾಕ್ಷಿ ನುಡಿದಿದ್ದು, ಅದೇ ರೀತಿ ತನ್ನ ಪಾಟೀಸವಾಲಿನಲ್ಲಿ ವಾದಿ ಆಶಾ ಇವಳಿಗೆ ಸ್ವಂತ ಆದಾಯದ ಮೂಲಗಳು ಯಾವವು ಇರುವುದಿಲ್ಲವೆಂದು ಸಾಕ್ಷಿ ನುಡಿದ ಕಾರಣ, ದಾವಾ ಆಸ್ತಿಯನ್ನು 1 ರಿಂದ 4 ನೇ ಪ್ರತಿವಾದಿಗಳಿಂದ ಕ್ರಯಕ್ಕೆ ತೆಗೆದುಕೊಳ್ಳಲು ವಾದಿಯ ಬಳಿ ಕ್ರಯದ ಮೊತ್ತವಾದ 10,80,000/- ಸ್ವಂತ ಹಣ ಇರಲಿಲ್ಲವೆಂದು ಪಿ.ಡಬ್ಲೂ-1 ರವರ ಸದರಿ ಪಾಟಿಸವಾಲಿನ ಸಾಕ್ಷಿಯ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ, ಒಂದು ವೇಳೆ

ವಾದಿಯ ಹೆಸರಿನಲ್ಲಿ ದಾವಾ ಆಸ್ತಿಯನ್ನು ಕುಟುಂಬದ ಹಣದಿಂದ ಅಥವಾ ವಾದಿಯ ಗಂಡನ ಹಣದಿಂದ ಖರೀದಿಸುವ ಉದ್ದೇಶವನ್ನು ಹೊಂದಿದ್ದರೆ, ಆ ರೀತಿ ನಿಪಿ-2 ರಲ್ಲಿ ಹೇಳಬೇಕಾಗಿತ್ತು, ಅದೇ ರೀತಿ ವಾದಪತ್ರದಲ್ಲಿಯೂ ಹೇಳಬೇಕಾಗಿತ್ತು. ಆದರೆ ಆ ರೀತಿ ಹೇಳಿಲ್ಲ. ಅಲ್ಲದೆ, ಸದರಿ ಕ್ರಯದ ಸಂಪೂರ್ಣ ವ್ಯವಹಾರದಲ್ಲಿ ವಾದಿಯ ಗಂಡ ಭಾಗವಹಿಸಿದ್ದರಿಂದ, ದಾವಾ ಆಸ್ತಿಯನ್ನು ಸ್ವತಃ ಅವನೇ ಖರೀದಿಸಬಹುದಾಗಿತ್ತು, ಆದರೆ ಆ ರೀತಿ ಸ್ವತಃ ಅವನೇ ಖರೀದಿಸದೇ ಇರುವುದಕ್ಕೆ ಇದ್ದಂತಹ ಕಾರಣಗಳು ಏನು ಎನ್ನುವುದನ್ನು ನಿಪಿ-2 ರಲ್ಲಾಗಲೀ ಅಥವಾ ವಾದಪತ್ರದಲ್ಲಾಗಲೀ ಹೇಳಿಲ್ಲ. ಆದ್ದರಿಂದ, ದಿನಾಂಕಃ 04-04-2019 ರಂದು ಆದಂತಹ ಕ್ರಯದ ಕರಾರಿನ ವ್ಯವಹಾರದ ಮುಂಗಡವಾಗಿ ಕೊಟ್ಟಂತಹ ಹಣ, ವಾದಿಯ ಸ್ವಂತ ಹಣ ಅಲ್ಲ, ಅದು ಅವಳ ಗಂಡನ ಹಣ ಎಂದು ಕಂಡುಬರುತ್ತದೆ. ಆದ್ದರಿಂದ, *ನಿರ್ದಿಷ್ಟ ಪರಿಹಾರ ಅಧಿನಿಯಮ 1963 ರ ಕಲಂ 16 (ಸಿ) ಅಡಿಯಲ್ಲಿ ಹೇಳಿದಂತೆ*, ವಾದಿಯಾದ ಕೆ.ಎಸ್. ಆಶಾ ಇವಳು ತನ್ನ ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ಅವಳ ಬಳಿ ಸ್ವಂತ ಹಣ ಇರಲಿಲ್ಲ ಹಾಗೂ ಅವಳು ನೊಂದಾಯಿತ ಕ್ರಯಪತ್ರವನ್ನು ಬರೆಯಿಸಿಕೊಳ್ಳಲು ಸದಾ ತಯಾರಿ ಹಾಗೂ ಇಚ್ಛೆ ಹೊಂದಿರುತ್ತಾಳೆ ಎಂದು ಕಂಡುಬರುವುದಿಲ್ಲ.

**35**. ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ದಾವಾ ಆಸ್ತಿಯು ವಾದಿಯರ ತಂದೆಯಾದ ಮೃತ ರಂಗಪ್ಪನಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಇದ್ದು, 1 ರಿಂದ 4 ನೇ ಪ್ರತಿವಾದಿಗಳು ಹಾಗು ವಾದಿಗಳು ಅವಿಭಕ್ತಕುಟುಂಬದ ಸದಸ್ಯರಾಗಿ ದಾವಾ ಸ್ವತ್ತಿನಲ್ಲಿ ಹಕ್ಕನ್ನು ಉಳ್ಳವರು ಎಂದು ಆರೋಪಿದ್ದು, ಅದರಂತೆ ಸದರಿ ದಾವೆಯ ಪಿ.ಡಬ್ಲೂ-1 ತನ್ನ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ನುಡಿದಿರುತ್ತಾನೆ. ಅಲ್ಲದೆ, ದಾವಾ ಆಸ್ತಿಯ ಪಹಣಿ ಪತ್ರಿಕೆಯಾದ ನಿಡಿ-1 ರ ಪ್ರಕಾರ, ದಾವಾ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಇರುತ್ತದೆ. ಅಲ್ಲದೆ, ಡಿ.ಡಬ್ಲೂ-1 ತನ್ನ

ಪಾಟಿಸವಾಲಿನಲ್ಲಿ ದಾವಾ ಆಸ್ತಿ ತುಂಬಾ ಫಲವತ್ತಾದ ಜಮೀನು ಎಂದರೆ ನಿಜ. ಇದು ಒಂದೇ ತಮಗೆ ಪಿತ್ರಾರ್ಜಿತವಾಗಿ ಇರುವ ಆಸ್ತಿ ಎಂದರೆ ನಿಜ. ದಾವಾ ಆಸ್ತಿಯಲ್ಲಿ ತನಗೆ, ತನ್ನ ಮೂರು ಜನ ಸಹೋದರಿಗೆ ಮತ್ತು ತಮ್ಮ ಮಕ್ಕಳಿಗೆ ಹಾಗೂ ಸಹೋದರರ ಮಕ್ಕಳಿಗೆ ಹಕ್ಕು ಇರುತ್ತದೆ ಎನ್ನುವುದು  ನಿಜ. ದಾವಾ ಆಸ್ತಿ ತಮ್ಮ ತಾತನಿಂದ ತಮಗೆ ಬಂದಾಗ ತಮ್ಮ ತಂದೆ ತಮ್ಮ ತಾತ ಮೃತಪಟ್ಟಿದ್ದರು ಎನ್ನುವುದು ನಿಜ. ಭಾಗ ಮಾಡಿಕೊಂಡಾಗ ಈ ಪಿತ್ರಾರ್ಜಿತ ಆಸ್ತಿ ತಮ್ಮ 4 ಜನ ಸಹೋದರರ ಭಾಗಕ್ಕೆ ಬಂದಿರುತ್ತದೆ ಎನ್ನುವುದು ನಿಜ. ದಾವಾ ಆಸ್ತಿ ಇಂದಿಗೂ ಜಂಟಿ ಕುಟುಂಬದ ತಮಗೆ ಹಾಗೂ ತಮ್ಮ ಮಕ್ಕಳಿಗೆ ಹಕ್ಕು ಇರುತ್ತದೆ ಎನ್ನುವುದು ನಿಜವೆಂದು ಸಾಕ್ಷಿ ನುಡಿದಿರುವುದರಿಂದ ಹಾಗೂ ಮೂಲ ದಾವೆ ನಂ-29/2019 ರಲ್ಲಿ ವಾದಿಯ ಪರ ಸಾಕ್ಷಿ ನುಡಿದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ ದಾವಾ ಸ್ವತ್ತು 1 ರಿಂದ 4 ನೇ ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತು.  ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದು, ವಕೀಲರ ಮೂಲಕ ಸಲಹೆ ಪಡೆದಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರ ಮಕ್ಕಳಿಗೆ ಹಕ್ಕು ಇದ್ದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಗಮನಿಸಿಲ್ಲ ಎಂದು ಸಾಕ್ಷಿ ನುಡಿದಿರುವುದರಿಂದ, ಅದೇ ರೀತಿ ತನ್ನ ಪಾಟಿಸವಾಲಿನಲ್ಲಿ 1 ರಿಂದ 4 ನೇ ಪ್ರತಿವಾದಿಗಳಿಗೆ ಎಷ್ಟು ಜನ ಹೆಣ್ಣುಮಕ್ಕಳು ಹಾಗೂ ಎಷ್ಟು ಜನ ಗಂಡುಮಕ್ಕಳು ಇರುತ್ತಾರೆ ಎನ್ನುವುದನ್ನು ದಾವಾ ಆಸ್ತಿಯನ್ನು ಖರೀದಿಸುವಾಗ ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನಲ್ಲಿ ಅವರ ಮಕ್ಕಳಿಗೆ ಹಕ್ಕು ಇದ್ದು, ಖರೀದಿ ಮಾಡಿದರೆ ಮುಂದೆ ತೊಂದರೆ ಆಗುತ್ತದೆ ಎನ್ನುವುದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲವೆಂದು ಸಾಕ್ಷಿ ನುಡಿದಿರುವುದರಿಂದ, ದಾವಾ ಆಸ್ತಿಯು ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ತಮ್ಮ ವಾದಪತ್ರದಲ್ಲಿ ಆರೋಪಿಸಿದಂತೆ ದಾವಾ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ತಂದೆಯಾದ ರಂಗಪ್ಪನಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತು ಇದ್ದು,

ಈಗ ಸದರಿ ದಾವೆಯ ವಾದಿಗಳಿಗೆ ಹಾಗೂ 1 ರಿಂದ 4 ನೇ ಪ್ರತಿವಾದಿಗಳಿಗೆ ಪಿತ್ರಾರ್ಜಿತವಾದ ಸ್ವತ್ತು ಆಗಿರುವುದು ಕಂಡುಬರುತ್ತದೆ. ಆದ್ದರಿಂದ, ದಾವಾ ಆಸ್ತಿಯು ಮೂಲ ದಾವೆ ನಂ-16/2020 ರಲ್ಲಿನ 1 ರಿಂದ 4 ನೇ ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತು ಇದ್ದು, ಅದರಂತೆ ಸದರಿ ಸ್ವತ್ತು 1 ರಿಂದ 4 ನೇ ಪ್ರತಿವಾದಿಗಳ ಮಕ್ಕಳಿಗೂ ಪಿತ್ರಾರ್ಜಿತವಾದ ಆಸ್ತಿ ಇರುತ್ತದೆ. ಆದ್ದರಿಂದ, 1 ರಿಂದ 4 ನೇ ಪ್ರತಿವಾದಿಗಳು ಮಾತ್ರ ದಾವಾ ಸ್ವತ್ತನ್ನು 5 ನೇ ಪ್ರತಿವಾದಿಯಾದ ಶ್ರೀಮತಿ ಕೆ.ಎಸ್. ಆಶಾ ಇವಳಿಗೆ ಮಾರಾಟ ಮಾಡಲು ಸಂಪೂರ್ಣ ಹಕ್ಕನ್ನು ಹೊಂದಿಲ್ಲ, ಬದಲಾಗಿ 1 ರಿಂದ 4 ನೇ ಪ್ರತಿವಾದಿಗಳ ಮಕ್ಕಳೂ ಸಹ ಸದರಿ ಆಸ್ತಿಯಲ್ಲಿ ಹಕ್ಕನ್ನು ಹೊಂದಿರುತ್ತಾರೆ. ಅಲ್ಲದೆ, ಮೂಲ ದಾವೆ ನಂ-29/2019 ರಲ್ಲಿನ ನಿಪಿ-2 ಕ್ರಯದ ಕರಾರು ಪತ್ರಕ್ಕೆ 1 ರಿಂದ 4 ನೇ ಪ್ರತಿವಾದಿಗಳ ಮಕ್ಕಳು ಪಕ್ಷಗಾರರಾಗಿರುವುದಿಲ್ಲ. ಆದ್ದರಿಂದ, 3 ನೇ ಪ್ರತಿವಾದಿಯ ಮಕ್ಕಳಾದ ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ಸದರಿ ಆಸ್ತಿಯನ್ನು 5 ನೇ ಪ್ರತಿವಾದಿಯಾದ ಶ್ರೀಮತಿ ಕೆ.ಎಸ್. ಆಶಾ ಇವಳಿಗೆ ಮಾರಾಟ ಮಾಡುವುದಾಗಿ ಒಪ್ಪಿ, ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿಲ್ಲ. ಆದ್ದರಿಂದ, ದಾವಾ ಆಸ್ತಿಯಲ್ಲಿ ಹಕ್ಕನ್ನು ಹೊಂದಿದಂತಹ ಎಲ್ಲಾ ವ್ಯಕ್ತಿಗಳು ಸೇರಿ ಮೂಲ ದಾವೆ ನಂ-29/2019 ರಲ್ಲಿನ ವಾದಿಗೆ ದಿನಾಂಕಃ 04-04-2019 ರಂದು ನೊಂದಾಯಿತ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿಲ್ಲ.

**36**. ದಾವಾ ಆಸ್ತಿಯು ಮೂಲ ದಾವೆ ನಂ-16/2020 ರ ವಾದಪತ್ರದಲ್ಲಿ ಆರೋಪಿಸಿದಂತೆ 1 ರಿಂದ 4 ನೇ ಪ್ರತಿವಾದಿಗಳ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದ್ದು, ಈಗ ಸದರಿ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ಮತ್ತು ಅವರ ಮಕ್ಕಳಿಗೆ ಪಿತ್ರಾರ್ಜಿತವಾಗಿ ಇರುವಂತಹ ಆಸ್ತಿಯಾಗಿರುತ್ತದೆ. ಆದ್ದರಿಂದ, ಸದರಿ ಆಸ್ತಿಯನ್ನು 1 ರಿಂದ 4 ನೇ ಪ್ರತಿವಾದಿಗಳು ಮಾರಾಟ ಮಾಡಲು ಸಂಪೂರ್ಣ ಹಾಗು

ಸ್ವತಂತ್ರವಾದ ಹಕ್ಕನ್ನು ಹೊಂದಿಲ್ಲ. ಅಲ್ಲದೆ, ದಿನಾಂಕಃ 04-04-2019 ರ ನೊಂದಾಯಿತ ಕ್ರಯದ ಕರಾರುಪತ್ರಕ್ಕೆ 3 ನೇ ಪ್ರತಿವಾದಿಯ ಮಕ್ಕಳಾದ ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ಪಕ್ಷಗಾರರು ಅಲ್ಲ ಮತ್ತು ಅದನ್ನು ಅವರು ಬರೆದುಕೊಟ್ಟಿಲ್ಲ. ಆದ್ದರಿಂದ, ಮೂಲ ದಾವೆ ನಂ-29/2019 ರಲ್ಲಿನ ವಾದಿಯು ದಾವಾ ಆಸ್ತಿಯಲ್ಲಿ ಹಕ್ಕನ್ನು ಹೊಂದಿದಂತಹ ಎಲ್ಲಾ ವ್ಯಕ್ತಿಗಳಿಂದ ಕ್ರಯದ ಕರಾರುಪತ್ರವನ್ನು ಬರೆಸಿಕೊಂಡಿಲ್ಲ. ಕೇವಲ 1 ರಿಂದ 4 ನೇ ಪ್ರತಿವಾದಿಗಳಿಂದ ಮಾತ್ರ ನೊಂದಾಯಿತ ಕ್ರಯದ ಕರಾರುಪತ್ರವನ್ನು ಬರೆಸಿಕೊಂಡಿರುವುದರಿಂದ, ಹಾಗೂ ನಿಪಿ-2 ರಲ್ಲಿನ ಷರತ್ತಿನಂತೆ ಸದರಿ ಕ್ರಯದ ಕರಾರಿನ ದಿನಾಂಕದಿಂದ 3 ತಿಂಗಳ ಒಳಗೆ ಕ್ರಯದ ಉಳಿದ ಮೊತ್ತ 6,20,000/- ರೂಗಳನ್ನು ವಾದಿ ಪಾವತಿಸಬೇಕಾಗಿದ್ದರೂ ಸಹ, ಆ ರೀತಿ 3 ತಿಂಗಳ ಒಳಗೆ ಉಳಿದ ಕ್ರಯದ ಕರಾರಿನ ಮೊತ್ತವನ್ನು ವಾದಿ ಪಾವತಿಸಲು ತಯಾರಿ ಇರುವುದನ್ನು ಸಾಭೀತುಪಡಿಸದ ಕಾರಣ, ವಾದಿಯ ಪರ ವಕೀಲರು ಮೇಲೆ ಹೇಳಲಾದ ಮಾನ್ಯ ಸರ್ವೋಚ್ಚನ್ಯಾಯಾಲಯದ ನಿರ್ಧರಿತ ಪ್ರಕರಣಗಳ ವಸ್ತು-ಸ್ಥಿತಿ ಮತ್ತು ಸಂದರ್ಭಗಳು ಬೇರೆ ಇದ್ದು, ಈ ಪ್ರಕರಣದ ವಸ್ತು-ಸ್ಥಿತಿ ಮತ್ತು ಸಂದರ್ಭ ಬೇರೆಯೇ ಇರುವ ಕಾರಣ, ಸದರಿ ನಿರ್ಧರಿತ ತೀರ್ಪುಗಳು ವಾದಿಯ ಕೇಸಿಗೆ ಸಹಾಯಕವಾಗಿರುವುದಿಲ್ಲ. ಆದ್ದರಿಂದ, ವಾದಿಯು ದಿನಾಂಕಃ 04-04-2019 ರ ತನ್ನ ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ತಾನು ಸದಾ ತಯಾರಿ ಹಾಗೂ ಇಚ್ಚೇ ಉಳ್ಳವಳು ಎನ್ನುವುದನ್ನು ಸಾಭೀತುಪಡಿಸದ ಕಾರಣ, **ಮೂಲ ದಾವೆ ನಂ-16/2020 ರಲ್ಲಿನ ವಿವಾದಾಂಶ-2 ಹಾಗೂ ಮೂಲ ದಾವೆ ನಂ-29/2019 ರಲ್ಲಿನ ಹೆಚ್ಚುವರಿ ವಿವಾದಾಂಶ-1 ನ್ನು ಸಕಾರಾತ್ಮಕವಾಗಿ ಮತ್ತು ಮೂಲ ದಾವೆ ನಂ-29/2019 ರಲ್ಲಿನ ವಿವಾದಾಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**37**. **<u>ಮೂಲ ದಾವೆ ನಂ-16/2020 ರಲ್ಲಿನ ವಿವಾದಾಂಶ-1-</u>** ದಿನಾಂಕಃ 04-04-2019 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ, 1 ರಿಂದ 4 ನೇ ಪ್ರತಿವಾದಿಗಳು ಮೂಲ ದಾವೆ ನಂ-29/2019 ರಲ್ಲಿನ ವಾದಿಯ ಪರವಾಗಿ ನೊಂದಾಯಿತ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟು, ಕ್ರಯದ ಮೊತ್ತ 10,80,000/- ರೂಗಳಲ್ಲಿ ಮುಂಗಡವಾಗಿ ಸಾಕ್ಷಿದಾರರ ಸಮಕ್ಷಮ 4,60,000/- ರೂಗಳನ್ನು ವಾದಿಯಿಂದ ಪಡೆದುಕೊಂಡಿರುತ್ತಾರೆ ಎನ್ನುವುದನ್ನು ಮೂಲ ದಾವೆ ನಂ-29/2019 ರಲ್ಲಿನ ವಾದಿ ಸಾಭೀತುಪಡಿಸಿರುತ್ತಾಳೆ. ಆದರೆ, 3 ನೇ ಪ್ರತಿವಾದಿಯ ಮಕ್ಕಳಾದ ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ದಾವಾ ಆಸ್ತಿಯಲ್ಲಿ ತಮ್ಮ ತಂದೆಯೊಂದಿಗೆ ಹಿಸ್ಸೆಯ ಹಕ್ಕನ್ನು ಹೊಂದಿರುವ ಕಾರಣ ಹಾಗೂ ಸದರಿ ವಾದಿಗಳು ದಿನಾಂಕಃ 04-04-2019 ರ ಕ್ರಯದ ಕರಾರು ಪತ್ರವನ್ನು ಬರೆದುಕೊಡದ ಕಾರಣ ಹಾಗೂ ಸದರಿ ಕ್ರಯದ ಕರಾರು ಪತ್ರಕ್ಕೆ ವಾದಿಗಳು ಪಕ್ಷಗಾರರು ಅಲ್ಲದ ಕಾರಣ, ದಿನಾಂಕಃ 04-04-2019 ರಂದು 1 ರಿಂದ 4 ನೇ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟ ನೊಂದಾಯಿತ ಕ್ರಯದ ಕರಾರು ಪತ್ರವು ಮೂಲ ದಾವೆ ನಂ-16/2020 ರಲ್ಲಿನ ವಾದಿಗಳ ಹಿಸ್ಸೆಯ ಹಕ್ಕಿಗೆ ಬಾಂಧಾಯಿಸುವುದಿಲ್ಲ. ಆದ್ದರಿಂದ, **ವಿವಾದಾಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**38.** **<u>ಮೂಲ ದಾವೆ ನಂ-16/2020 ರಲ್ಲಿನ ವಿವಾದಾಂಶ-3-</u>** ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ತಮ್ಮ ವಾದಪತ್ರದಲ್ಲಿ ಆರೋಪಿಸಿದಂತೆ, ದಾವಾ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ತಂದೆಯಾದ ರಂಗಪ್ಪನಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದ್ದು, ಈಗ ಸದರಿ ಆಸ್ತಿಯು ವಾದಿಗಳಿಗೂ ಪಿತ್ರಾರ್ಜಿತವಾದ ಆಸ್ತಿಯಾಗಿರುತ್ತದೆ. ಆದರೆ ವಾದಿಗಳು ತಮ್ಮ ವಾದಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ತಮ್ಮ ತಂದೆಯಾದ 3 ನೇ ಪ್ರತಿವಾದಿಗೆ ಸೇರಿದ ¼ ಹಿಸ್ಸೆಯಲ್ಲಿ ತಮಗೆ ತಲಾ 1/6 ಹಿಸ್ಸೆಯ

ಹಕ್ಕು ಇದೆ ಎಂದು ಘೋಷಿಸಿ, ಅದರಂತೆ ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕು ಎಂಬ ಪರಿಹಾರಗಳನ್ನು ಕೋರಿರುತ್ತಾರೆ. ಆದರೆ, ವಾದಿಗಳು ದಾವಾ ಆಸ್ತಿಯಲ್ಲಿ ತಮ್ಮ ತಂದೆಯಾದ 3 ನೇ ಪ್ರತಿವಾದಿಯ ¼ ಹಿಸ್ಸೆಯಲ್ಲಿ ಸಮನಾದ ಹಿಸ್ಸೆಯ ಹಕ್ಕನ್ನು ಹೊಂದಿದ್ದರೂ ಸಹ, ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ, ತಮ್ಮ ತಂದೆ ಮತ್ತು ತಾವು ವಿಭಾಗಮಾಡಿಕೊಂಡಿಲ್ಲ ಎನ್ನುವುದು ನಿಜ. ತಮ್ಮ ತಂದೆಯನ್ನು ಭಾಗ ಕೊಡಿ ಎಂದು ಎಂದಿಗೂ ಕೇಳಿಲ್ಲ. ಇಂದಿಗೂ ಸಹ, ತಮ್ಮ ತಂದೆಯನ್ನು ಭಾಗ ಕೇಳುವ ಆಸೆ ತನಗೆ ಇಲ್ಲ ಎನ್ನುವುದು ನಿಜವೆಂದು ಸಾಕ್ಷಿ ನುಡಿದ ಕಾರಣ, ಸದರಿ ಸಾಕ್ಷಿಯ ಪ್ರಕಾರ ವಾದಿಗಳು ದಾವಾ ಆಸ್ತಿಯಲ್ಲಿ ತಮ್ಮ ಹಿಸ್ಸೆಯನ್ನು ಪ್ರತ್ಯೇಕಿಸಿ ಕೊಡುವಂತೆ 1 ರಿಂದ 4 ನೇ ಪ್ರತಿವಾದಿಗಳನ್ನು ಕೇಳಿಲ್ಲ ಹಾಗೂ ದಾವಾ ಆಸ್ತಿಯಲ್ಲಿ ತಮ್ಮ ಭಾಗವನ್ನು ಕೊಡಿ ಎಂದು ತಮ್ಮ ತಂದೆಯನ್ನು ಕೇಳುವ ಆಸೆ ವಾದಿಗಳಿಗೆ ಇಲ್ಲದ ಕಾರಣ, ಮೂಲ ದಾವೆ ನಂ-16/2020 ನ್ನು ಸಲ್ಲಿಸಲು ದಾವಾ ಕಾರಣ ಉಂಟಾಗಿಲ್ಲವೆಂದು ಪಿ.ಡಬ್ಲೂ-1 ರವರ ಸದರಿ ಪಾಟಿಸವಾಲಿನ ಸಾಕ್ಷಿಯ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ, ವಾದಿಗಳು ದಾವೆಯಲ್ಲಿ ಕೇಳಿದಂತೆ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಸಲುವಾಗಿ ದಾವಾ ಕಾರಣ ಉಂಟಾಗದೇ ಇರುವುದರಿಂದ, ವಾದಿಗಳು ಈಗ ದಾವಾ ಆಸ್ತಿಯಲ್ಲಿ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

**39**. ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ದಾವಾ ಆಸ್ತಿಯನ್ನು 1 ರಿಂದ 4 ನೇ ಪ್ರತಿವಾದಿಗಳು 1 ನೇ ವಾದಿಯ ಹೆಸರಿಗೆ ನೊಂದಾಯಿತ ಕ್ರಯಪತ್ರವನ್ನು ಮಾಡಿಸಿಕೊಡುವಂತೆ, ನಿರ್ದೇಶಿಸಿ ಆದೇಶಿಸಬೇಕು ಎಂಬ ಪರಿಹಾರವನ್ನು ಕೋರಿರುವ ಕಾರಣ, ವಾದಿಗಳು ದಾವಾ ಆಸ್ತಿಯನ್ನು 1 ನೇ ವಾದಿಯ ಹೆಸರಿಗೆ ಖರೀದಿಸುವ ಉದ್ದೇಶವನ್ನು ಹೊಂದಿರುವುದು ಕಂಡುಬರುತ್ತದೆ ವಿನಃ, ಉಳಿದ 2 ರಿಂದ 5 ನೇ ವಾದಿಗಳ

ಹೆಸರಿಗೆ ಕ್ರಯಕ್ಕೆ ತೆಗೆದುಕೊಳ್ಳುವ ಉದ್ದೇಶವನ್ನು ಹೊಂದಿಲ್ಲವೆಂದು ಕಂಡುಬರುತ್ತದೆ. ಅಲ್ಲದೆ, ದಾವಾ ಆಸ್ತಿಯಲ್ಲಿ 1 ರಿಂದ 4 ನೇ ಪ್ರತಿವಾದಿಗಳು ಸಮನಾದ ಹಿಸ್ಸೆಯ ಹಕ್ಕನ್ನು ಹೊಂದಿದ್ದರಿಂದ ಮತ್ತು ಅವರ ಜಂಟಿ ಖಾತೆಯಲ್ಲಿ ಇರುವ ಆಸ್ತಿಯಾಗಿದ್ದು, ವಾದಿಗಳು 3 ನೇ ಪ್ರತಿವಾದಿಯ ಮಕ್ಕಳು ಇರುವ ಕಾರಣ, ಅವರು 3 ನೇ ಪ್ರತಿವಾದಿಗೆ ಮಾತ್ರ 1 ನೇ ವರ್ಗದ ವಾರಸುದಾರರು ಇರುತ್ತಾರೆ ವಿನಃ, 1, 2 ಮತ್ತು 4 ನೇ ಪ್ರತಿವಾದಿಗಳಿಗೆ 1 ನೇ ವರ್ಗದ ವಾರಸುದಾರರು ಅಲ್ಲ. ಅಲ್ಲದೆ,1, 2 ಮತ್ತು 4 ನೇ ಪ್ರತಿವಾದಿಗಳೊಂದಿಗೆ 1 ನೇ ವರ್ಗದ ವಾರಸುದಾರರು ಅಲ್ಲ. ಆದ್ದರಿಂದ, ಆಸ್ತಿಯನ್ನು ಖರೀದಿಸಲು ಆದ್ಯತೆಯ ಹಕ್ಕನ್ನು *ಹಿಂದೂ ಉತ್ತರಾಧಿಕಾರ ಅಧಿನಿಯಮ 1956 ರ ಕಲಂ 22 (1) ರ ಅಡಿಯಲ್ಲಿ* ಹೇಳಿದಂತವರು ಮಾತ್ರ ಹೊಂದಿರುತ್ತಾರೆ. ಸದರಿ, ಕಾಯ್ದೆಯ ಕಲಂ 22(1) ಈ ಕೆಳಗಿನಂತೆ ಇರುತ್ತದೆ.

> (1) ಈ ಅಧಿನಿಯಮದ ಪ್ರಾರಂಭದ ತರುವಾಯ, ಮರಣಶಾಸನ ರಹಿತನ ಸ್ಥಿರಾಸ್ತಿಯಲ್ಲಿ ಅಥವಾ ಆತ ಇಲ್ಲವೇ ಆಕೆಯು ಒಂಟಿಯಾಗಿ ಅಥವಾ ಇತರರ ಜೊತೆಗೂಡಿ ನಡೆಸುತ್ತಿದ್ದ ಯಾವುದೇ ವ್ಯವಹಾರದಲ್ಲಿಯ ಒಂದು ಹಿತಾಸಕ್ತಿಯು ಅನುಸೂಚಿಯು 1 ನೇ ವರ್ಗದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಇಬ್ಬರು ಅಥವಾ ಹೆಚ್ಚು ಮಂದಿ ವಾರಸುದಾರರಿಗೆ ಪ್ರಾಪ್ತವಾಗಿದ್ದು ಅಂಥ ವಾರಸುದಾರರಲ್ಲಿ ಯಾರೊ ಒಬ್ಬನು ತನ್ನ ಹಿತಾಸಕ್ತಿಯನ್ನು ವರ್ಗಾಯಿಸಲು ಉದ್ದೇಶಿಸಿದರೆ, ಹಾಗೆ ವರ್ಗಾಯಿಸಲು ಉದ್ದೇಶಿಸಲಾದ ಹಿತಾಸಕ್ತಿಯನ್ನು ಖರೀದಿಸಿ ಪಡೆದುಕೊಳ್ಳಲು ಆದ್ಯತೆಯ ಹಕ್ಕನ್ನು ಹೊಂದಿರತಕ್ಕದ್ದು.

ಮೇಲೆ ಹೇಳಿದ ಸದರಿ ಕಾಯ್ದೆಯ ಕಲಂ 22(1) ರ ಅಡಿಯಲ್ಲಿ ಹೇಳಿದಂತೆ ದಾವಾ ಆಸ್ತಿಯನ್ನು 1 ನೇ ವಾದಿ ಖರೀದಿಸುವ ಉದ್ದೇಶವನ್ನು ಹೊಂದಿರುತ್ತಾನೆ ವಿನಃ, ವಾದಿಗಳ ತಂದೆಯಾದ 3 ನೇ ಪ್ರತಿವಾದಿಯು ತನ್ನ ಸಹೋದರರಾದ 1, 2 ಮತ್ತು 4 ನೇ ಪ್ರತಿವಾದಿಗಳಿಂದ ದಾವಾ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳುವ ಉದ್ದೇಶವನ್ನು

ಹೊಂದಿರುತ್ತಾನೆ ಎಂದು ವಾದಿಗಳು ತಮ್ಮ ವಾದಪತ್ರದಲ್ಲಿ ಹೇಳಿಲ್ಲ. ಅಲ್ಲದೆ, 3 ನೇ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ಸದರಿ ಕ್ರಯದ ಕರಾರುಪತ್ರದಲ್ಲಿ ಕಾಣಿಸಿರುವ ಮೊಬಲಗಿಗೆ 3 ನೇ ಪ್ರತಿವಾದಿಯು ಕೊಂಡುಕೊಳ್ಳಲು ತಯಾರಿ ಇರುತ್ತಾನೆ ಎಂದು ಮಾತ್ರ ಹೇಳಿರುತ್ತಾನೆ ವಿನಃ, ಆ ರೀತಿ ಪರಿಹಾರವನ್ನು ತನಗೆ ಕೊಡಿಸಬೇಕು ಎಂದು ತನ್ನ ಲಿಖಿತ ಹೇಳಿಕೆಯಲ್ಲಿ ಕೇಳಿಲ್ಲ. ಆದ್ದರಿಂದ, ವಾದಿಗಳು 1, 2 ಮತ್ತು 4 ನೇ ಪ್ರತಿವಾದಿಗಳೊಂದಿಗೆ 1 ನೇ ವರ್ಗದ ವಾರಸುದಾರರು ಅಲ್ಲದ ಕಾರಣ, 1, 2 ಮತ್ತು 4 ನೇ ಪ್ರತಿವಾದಿಗಳು ಮಾರಾಟ ಮಾಡುತ್ತಿರುವ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳಲು ಅವರೊಂದಿಗೆ ವಾದಿಗಳು 1 ನೇ ವರ್ಗದ ವಾರಸುದಾರರು ಅಲ್ಲದ ಕಾರಣ, ವಾದಿಗಳು ದಾವೆಯಲ್ಲಿ ಕೇಳಿದಂತೆ 1 ನೇ ವಾದಿಗೆ ದಾವಾ ಆಸ್ತಿಯನ್ನು ಖರೀದಿಸುವ ಆದ್ಯತೆಯ ಹಕ್ಕು ಇರುವುದಿಲ್ಲ. ಆದ್ದರಿಂದ, ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ತಮ್ಮ ವಾದಪತ್ರದಲ್ಲಿ ಕೋರಿದಂತಹ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರವಾಗಲೀ ಅಥವಾ ದಾವಾ ಆಸ್ತಿಯನ್ನು ಆದ್ಯತೆಯ ಹಕ್ಕಿನ ಮೇಲೆ 1 ನೇ ವಾದಿ ಖರೀದಿಸುವ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲವೆಂದು ತೀರ್ಮಾನಿಸಿ, **ವಿವಾದಾಂಶ-3 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**40. <u>ಮೂಲ ದಾವೆ ನಂ-29/2019 ರಲ್ಲಿನ ವಿವಾದಾಂಶ 2</u>-** ಮೂಲ ದಾವೆ ನಂ-29-2019 ರಲ್ಲಿನ ವಾದಿಯು ತನ್ನ ವಾದಪತ್ರದಲ್ಲಿ ಆರೋಪಿಸಿದಂತೆ, ದಿನಾಂಕಃ 04-04-2019 ರಂದು ದಾವಾ ಆಸ್ತಿಯನ್ನು 1 ರಿಂದ 4 ನೇ ಪ್ರತಿವಾದಿಗಳು 10,80,000/- ರೂಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ, ಸಾಕ್ಷಿದಾರರ ಸಮಕ್ಷಮ ಮುಂಗಡವಾಗಿ 4,60,000/- ರೂಗಳನ್ನು ಪಡೆದುಕೊಂಡು ವಾದಿಯ ಪರವಾಗಿ ನೊಂದಾಯಿತ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದನ್ನು ಸಾಭೀತುಪಡಿಸಿರುತ್ತಾಳೆ. ಆದರೆ, ಸದರಿ ವಾದಿಯು ತಾನು ಕ್ರಯದ ಕರಾರಿನ ಭಾಗದಂತೆ

ನಡೆದುಕೊಳ್ಳಲು ಸದಾ ತಯಾರಿ ಹಾಗೂ ಇಚ್ಚೆ ಉಳ್ಳವಳು ಎನ್ನುವುದನ್ನು ಸಾಭೀತುಪಡಿಸಿರುವುದಿಲ್ಲ. ಅಲ್ಲದೆ, ದಾವಾ ಆಸ್ತಿಯು 3 ನೇ ಪ್ರತಿವಾದಿಯ ಮಕ್ಕಳಾದ ಮೂಲ ದಾವೆ ನಂ-16/2020 ರಲ್ಲಿನ ವಾದಿಗಳಿಗೆ ಪಿತ್ರಾರ್ಜಿತವಾದ ಆಸ್ತಿಯಾಗಿದ್ದು, ಅವರಿಗೂ ಹಿಸ್ಸೆಯ ಹಕ್ಕು ಇದ್ದು, ಅವರು ದಿನಾಂಕಃ 04-04-2019 ರಂದು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡುವುದಾಗಿ ಒಪ್ಪಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲವಾದ ಕಾರಣ, ವಾದಿ ದಾವೆಯಲ್ಲಿ ಕೇಳಿದಂತೆ ದಿನಾಂಕಃ 04-04-2019 ರ ಕ್ರಯದ ಕರಾರು ಪತ್ರದಂತೆ ನೊಂದಾಯಿತ ಕ್ರಯಪತ್ರವನ್ನು ಬರೆಯಿಸಿಕೊಳ್ಳುವ ಪರಿಹಾರವನ್ನು ಪಡೆಯಲು ಅರ್ಹಳಾಗಿರುವುದಿಲ್ಲ.

**41**. ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ತಮ್ಮ ವಾದಪತ್ರದ ಪ್ರಾರ್ಥನೆಯ ಖಂಡಿಕೆ-(ಇ) ರಲ್ಲಿ ಕ್ರಯದ ಕರಾರಿನಲ್ಲಿ 5 ನೇ ಪ್ರತಿವಾದಿ ನೀಡಿದ ಮುಂಗಡ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲು 1 ರಿಂದ 4 ನೇ ಪ್ರತಿವಾದಿಗಳಿಗೆ ನಿರ್ದೇಶಿಸಿ ಆದೇಶಿಸಬೇಕೆಂಬ ಪರಿಹಾರವನ್ನು ಕೋರಿರುವ ಕಾರಣ, ಅದರಂತೆ ದಿನಾಂಕಃ 04-04-2019 ರಂದು ಆದ ಕ್ರಯದ ಕರಾರಿನಂತೆ 1 ರಿಂದ 4 ನೇ ಪ್ರತಿವಾದಿಗಳು ಮುಂಗಡವಾಗಿ 4,60,000/- ರೂಗಳನ್ನು ಮೂಲ ದಾವೆ ನಂ-29/2019 ರಲ್ಲಿನ ವಾದಿಯಿಂದ ಪಡೆದುಕೊಂಡಿರುತ್ತಾರೆ. ಅಲ್ಲದೆ, ಮೂಲ ದಾವೆ ನಂ-16/2020 ರಲ್ಲಿನ ವಾದಿಗಳು ತಮ್ಮ ಮೌಖಿಕ ವಾದಮಂಡನೆಯ ಸಮಯದಲ್ಲಿ ವಾದಿಯಿಂದ ಮುಂಗಡವಾಗಿ ಪಡೆದ 4,60,000/- ರೂಗಳನ್ನು ವಾದಿಗೆ ಹಿಂದಿರುಗಿಸಲು ಆದೇಶಿಸಬಹುದು ಎಂದು ಹೇಳಿರುವ ಕಾರಣ, ವಾದಿಯಿಂದ 1 ರಿಂದ 4 ನೇ ಪ್ರತಿವಾದಿಗಳು ಕ್ರಯದ ಕರಾರಿನ ಬಾಬ್ತು ಮುಂಗಡವಾಗಿ 4,60,000/- ರೂಗಳನ್ನು ಪಡೆದುಕೊಂಡ ಕಾರಣ, ಸದರಿ ಮುಂಗಡವಾಗಿ ಪಡೆದ ಹಣವನ್ನು 1 ರಿಂದ 4 ನೇ ಪ್ರತಿವಾದಿಗಳು ಸದರಿ ಕ್ರಯದ ಕರಾರು ಪತ್ರವಾದ ದಿನಾಂಕಃ 04-04-2019 ರಿಂದ ಸಂಪೂರ್ಣ ಹಣ ತಿರುವಳಿ

ಆಗುವವರೆಗೆ ವಾರ್ಷಿಕ ಶೇಕಡ 12 ರ ಬಡ್ಡಿಯ ದರದಲ್ಲಿ ವಾದಿಗೆ ಹಿಂದಿರುಗಿಸಲು ಆದೇಶಿಸುವುದು ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿರುತ್ತದೆ. ಆದ್ದರಿಂದ, ವಾದಿಯು ಮುಂಗಡವಾಗಿ ಕೊಟ್ಟಂತಹ 4,60,000/- ರೂಗಳನ್ನು ದಿನಾಂಕಃ 04-04-2019 ರಿಂದ ಸಂಪೂರ್ಣ ಹಣ ವಸೂಲಾಗುವವರೆಗೆ 1 ರಿಂದ 4 ನೇ ಪ್ರತಿವಾದಿಗಳಿಂದ ವಾರ್ಷಿಕ ಶೇಕಡ 12 ರ ಬಡ್ಡಿಯೊಂದಿಗೆ ಪಡೆಯಲು ಅರ್ಹಳಾಗಿರುತ್ತಾಳೆ ಎಂದು ತೀರ್ಮಾನಿಸಿ, **ವಿವಾದಾಂಶ 2 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**42**. **ಮೂಲ ದಾವೆ ನಂ 16/2020 ರಲ್ಲಿನ ವಿವಾದಾಂಶ-4 ಮತ್ತು ಮೂಲ ದಾವೆ ನಂ-29/2019 ರಲ್ಲಿನ ವಿವಾದಾಂಶ-3** -ಮೇಲಿನ ವಿವಾದಾಂಶಗಳಲ್ಲಿ ಹಾಗೂ ಹೆಚ್ಚುವರಿ ವಿವಾದಾಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದಃ

**ಆದೇಶ**

ಮೂಲ ದಾವೆ ನಂ-16/2020 ರ ವಾದಿಯರ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಮೂಲ ದಾವೆ ನಂ-29/2019 ರ ವಾದಿಯ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿಗೊಳಿಸಲಾಗಿದೆ.

ದಿನಾಂಕಃ 04-04-2019 ರ ನೊಂದಾಯಿತ ಕ್ರಯದ ಕರಾರುಪತ್ರದ ಪ್ರಕಾರ ನೊಂದಾಯಿತ ಕ್ರಯಪತ್ರವನ್ನು ಬರೆದು ಕೊಡಲು 1 ರಿಂದ 4 ನೇ ಪ್ರತಿವಾದಿಗಳಿಗೆ ನಿರ್ದೇಶಿಸಿ ಆದೇಶಿಸಬೇಕೆಂಬ ಪರಿಹಾರದ ವಾದಿಯ ಮೂಲ ದಾವೆ ನಂ-29/2019 ನ್ನು ವಜಾಗೊಳಿಸಲಾಗಿದೆ.

ದಿನಾಂಕ:04-04-2019 ರ ನೊಂದಾಯಿತ ಕ್ರಯದ ಕರಾರುಪತ್ರದ ಪ್ರಕಾರ ಮುಂಗಡವಾಗಿ ಪಡೆದ 4,60,000/- ರೂಗಳನ್ನು 1 ರಿಂದ 4 ನೇ ಪ್ರತಿವಾದಿಗಳು, ದಿನಾಂಕ:04-04-2019 ರಿಂದ ವಾರ್ಷಿಕ ಶೇಕಡ 12 ರ ಬಡ್ಡಿಯ ದರದಲ್ಲಿ ಮೂಲ ದಾವೆ ನಂ-29/2019 ರ ವಾದಿಗೆ ಹಿಂದಿರುಗಿಸಬೇಕೆಂದು ನಿರ್ದೇಶಿಸಿ ಆದೇಶಿಸಿದೆ.

ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

ಮೂಲ ತೀರ್ಪನ್ನು ಮೂಲ ದಾವೆ ನಂ-16/2020 ರಲ್ಲಿ ಇಟ್ಟು, ಅದರ ನಕಲನ್ನು ಮೂಲ ದಾವೆ ನಂ-29/2019 ರಲ್ಲಿ ಇಡತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು ದಿನಾಂಕ **1 ನೇ ಆಗಸ್ಟ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ವೈ. ಕೆ. ಬೇನಾಳ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹೊಸದುರ್ಗ.**

## ಅನುಬಂಧ

**ಅಸಲು ದಾವಾ ಸಂಖ್ಯೆ -16/2020 ರ ಲ್ಲಿನ ವಾದಿಯರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ**

ಪಿ.ಡಬ್ಲೂ-1 - ಪ್ರಕಾಶ್ ಎಂ.ಎ ತಂದೆ ಆಂಜನೇಯ @ ಅಂಜಿನಪ್ಪ

ಪಿ.ಡಬ್ಲೂ-2 - ಆರ್ ವೆಂಕಟೇಶ್ ತಂದೆ ದಿ: ಪೂಜಾರಿ ಜವಳಿ ರಂಗಪ್ಪ

**ಅಸಲು ದಾವಾ ಸಂಖ್ಯೆ -16/2020 ರ ಲ್ಲಿನ ವಾದಿಯರ ಪರವಾಗಿ ಗುರುತಿಸಲಾದ ದಾಖಲೆಗಳು**

| | |
|---|---|
| ನಿಪಿ-1 ರಿಂದ 4 | - 4 ಪಹಣಿ ಪತ್ರಿಕೆಗಳು |
| ನಿಪಿ-5 ರಿಂದ 7 | - 3 ಮುಟೇಶನ್ ರಿಜಿಸ್ಟರ್ ಪ್ರತಿಗಳು |
| ನಿಪಿ-8 | ದಿನಾಂಕಃ 04-04-2019 ರ ಕ್ರಯದ ಕರಾರುಪತ್ರದ ದೃಢೀಕೃತ ನಕಲು |
| ನಿಪಿ-9 | - ವಂಶವೃಕ್ಷ |
| ನಿಪಿ-10 ರಿಂದ 22 | - 13 ಪಹಣಿ ಪತ್ರಿಕೆಗಳು |
| ನಿಪಿ-22(ಎ) | - ಪಹಣಿ ಪತ್ರಿಕೆ |
| ನಿಪಿ-23 ಮತ್ತು 24 | - 2 ಪಹಣಿ ಪತ್ರಿಕೆಗಳು |
| ನಿಪಿ-24(ಎ) | - ಪಹಣಿ ಪತ್ರಿಕೆ |
| ನಿಪಿ-25 ಮತ್ತು 25(ಎ) | - 2 ಪಹಣಿ ಪತ್ರಿಕೆಗಳು |
| ನಿಪಿ-26 ರಿಂದ 41 | - 16 ಪಹಣಿ ಪತ್ರಿಕೆಗಳು |
| ನಿಪಿ-42 | - ಮುಟೇಶನ್ ರಿಜಿಸ್ಟರ್ ಪ್ರತಿ |
| ನಿಪಿ-43 ರಿಂದ 49 | - 7 ಪಹಣಿ ಪತ್ರಿಕೆಗಳು |
| ನಿಪಿ-50 ಮತ್ತು 51 | - 2 ಮುಟೇಶನ್ ರಿಜಿಸ್ಟರ್ ಪ್ರತಿಗಳು |
| ನಿಪಿ-52 ರಿಂದ 54 | - 3 ಪಹಣಿ ಪತ್ರಿಕೆ |
| ನಿಪಿ55 | - ಹಿಸ್ಸಾ ಮೋಜಿಣಿಯಂತೆ ಹಕ್ಕು ದಾಖಲಾತಿ ನಕಲು |
| ನಿಪಿ-56 | ಆಕಾರ್ ಬಂದ್ ನಕಲು |
| ನಿಪಿ-57 | ಹಿಸ್ಸಾ ಮೋಜಿಣಿಯಂತೆ ಹಕ್ಕು ದಾಖಲಾತಿ ನಕಲು |

**ಅಸಲು ದಾವಾ ಸಂಖ್ಯೆ -16/2020 ರ ಲ್ಲಿನ ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿ**

ಡಿ.ಡಬ್ಲೂ-1 - ಶರಣಪ್ಪ ತಂದೆ ಲೇಟ್ ರಂಗಪ್ಪ

**ಅಸಲು ದಾವಾ ಸಂಖ್ಯೆ -16/2020 ರ ಲ್ಲಿನ ಪ್ರತಿವಾದಿಯರ ಪರ ಗುರುತಿಸಲಾದ ದಾಖಲೆಗಳು**

ನಿಡಿ-1 ಪಹಣಿ ಪತ್ರಿಕೆ

**ಅಸಲು ದಾವಾ ಸಂಖ್ಯೆ -29/2019 ರಲ್ಲಿನ ವಾದಿಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ**

ಪಿ.ಡಬ್ಲೂ-1 - ಕೆ.ಸಿ. ಗುರುಸಿದ್ದಪ್ಪ ತಂದೆ ಚನ್ನಬಸಪ್ಪ

ಪಿ.ಡಬ್ಲೂ-2 - ಎನ್.ಬಿ. ಮಂಜುನಾಥ ತಂದೆ ಬೈರಪ್ಪ

ಪಿ.ಡಬ್ಲೂ-3 - ಡಿ.ಬೈರಪ್ಪ ತಂದೆ ಬೈರಪ್ಪ

**ಅಸಲು ದಾವಾ ಸಂಖ್ಯೆ -29/2019 ರಲ್ಲಿನ ವಾದಿಯ ಪರವಾಗಿ ಗುರುತಿಸಲಾದ ದಾಖಲೆಗಳು**

ನಿಪಿ-1 - ಜಿ.ಪಿ.ಎ

ನಿಪಿ-2 - ದಿನಾಂಕಃ 04-04-2019 ರ ಮೂಲ ನೊಂದಾಯಿತ ಕ್ರಯದ ಕರಾರು ಪತ್ರ

ನಿಪಿ-3 - ಪಹಣಿ ಪತ್ರಿಕೆ

ನಿಪಿ-4 - ಕಾನೂನು ರಿತ್ಯ ನೋಟೀಸಿನ ಕಛೇರಿ ಪ್ರತಿ

ನಿಪಿ-5 ರಿಂದ 8 - 4 ಅಂಚೆ ರಶೀದಿಗಳು

**ಅಸಲು ದಾವಾ ಸಂಖ್ಯೆ -29/2019 ರಲ್ಲಿನ ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿ**

----ಇಲ್ಲಾ----

**ಅಸಲು ದಾವಾ ಸಂಖ್ಯೆ -29/2019 ರಲ್ಲಿನ ಪ್ರತಿವಾದಿಯರ ಪರ ಗುರುತಿಸಲಾದ ದಾಖಲೆಗಳು**

--- ಇಲ್ಲಾ----

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಹೊಸದುರ್ಗ.**

YAMANOORAPPA KANAKAPPA BENAL

Digitally signed by YAMANOORAPPA KANAKAPPA BENAL
Date: 2026.08.01 18:21:08 +0530